ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 7 । ಸಂಚಿಕೆ : 9 । ಸೆಪ್ಟೆಂಬರ್-2025 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



ಎಸ್. ಚಂದ್ರಶೇಖರ್
ಅಧ್ಯಕ್ಷರು

ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು

## ಸಮಸ್ತ ಸಹಕಾರಿ ಬಂಧುಗಳಿಗೆ
## ನಾಡ ಹಬ್ಬ ನವರಾತ್ರಿಯ ಶುಭಾಶಯಗಳು

## ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಂದ ಸಹಕಾರ ಇಲಾಖಾ ಪ್ರಗತಿ ಪರಿಶೀಲನೆ







79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಪತ್ತಿನ ಮಹಾಮಂಡಳದ ಆವರಣದಲ್ಲಿ ಆಚರಿಸಲಾಯಿತು. ನಿರ್ದೇಶಕರಾದ ಡಾ॥ ನಾಗೇಂದ್ರ ಡಿ.ಎಲ್. ರವರು ಧ್ವಜಾರೋಹಣವನ್ನು ನೆರವೇರಿಸಿದರು. ಸಹಕಾರಿಗಳು ಮತ್ತು ಮಹಾಮಂಡಳದ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಬೆಂಗಳೂರಿನ ಯಶವಂತಪುರ ಕ್ರೆಡಿಟ್ ಕೋ– ಆಪರೇಟಿವ್ ಸೊಸೈಟಿಯ 51ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ರಾಜ್ಯದ ಅಂಧ ನೌಕರರಿಗಾಗಿ ಸಹಕಾರ ಪತ್ತಿನ ಸಂಘವನ್ನು ನೊಂದಾಯಿಸಿ, ಸಹಕಾರ ಚಳುವಳಿಯಲ್ಲಿ ಅಂಧರನ್ನು ಪಾಲ್ಗೊಳ್ಳುವಂತೆ ಮಾಡಿರುವ ಈ ಸಂಘವನ್ನು ಗೌರವಿಸಿ ಅಂಧ ನೌಕರರ ಸೊಸೈಟಿಯ ಉಪಯೋಗಕ್ಕಾಗಿ ಹೆಚ್.ಪಿ.ಲೇಜರ್ ಪ್ರಿಂಟರ್ ಅನ್ನು ಕೊಡುಗೆಯಾಗಿ ನೀಡಲಾಯಿತು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ


ಶಿದ್ದನಗೌಡ ಸಂಗನಬಸಪ್ಪಗೌಡ ಪಾಟೀಲ
ಸಹಕಾರಿ ಪಿತಾಮಹ


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಎಸ್. ಚಂದ್ರಶೇಖರ್
ಅಧ್ಯಕ್ಷರು


ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು


ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು


ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಉಮೇಶ ಶಿ. ಬಾಳಿ
ನಿರ್ದೇಶಕರು


ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು


ವೈ. ಶ್ರೀನಿವಾಸಗೌಡ
ನಿರ್ದೇಶಕರು


ಕೆ. ಜಗದೀಶ ಕಂದಿಕೆರೆ
ನಿರ್ದೇಶಕರು


ರಾಜೇಶ್ ಟಿ.
ನಿರ್ದೇಶಕರು


ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು


ಹೆಚ್. ಅಶೋಕ್
ನಿರ್ದೇಶಕರು


ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು


ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


**SAHAKARA VARTHA PATHRIKE KANNADA MONTHLY**
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



ಎಸ್. ಚಂದ್ರಶೇಖರ್
ಅಧ್ಯಕ್ಷರು

ಸಹಕಾರ ಸಂಸ್ಥೆಗಳು ಸೇವೆಯ ಜೊತೆಗೆ ಲಾಭದಲ್ಲ ಮುನ್ನಡೆದರೆ ಸಹಕಾರ ಚಳವಳಿಯು ಬಲಿಷ್ಠವಾಗಿ ಬೆಳೆದಂತಾಗುತ್ತದೆ. ಸದಸ್ಯರಲ್ಲಿ ಜಾಗೃತಿ ಅರಿವು ಮೂಡಿಸುವುದು ಅಗತ್ಯ. ಸದಸ್ಯರು ಸಾಲ ಪಡೆಯುವ ಸಂದರ್ಭದಲ್ಲಿ ಸಾಲ ಮರುಪಾವತಿ ಬಗ್ಗೆಯೂ ತಿಳುವಳಿಕೆ ಮೂಡಿಸುವುದು ಪ್ರತಿಯೊಂದು ಸಂಘದ ಅಧಿಕಾರಿಗಳ ಜವಾಬ್ದಾರಿಯಾಗಿದೆ.

# ಸಹಕಾರ ವ್ಯವಸ್ಥೆ ಬಲವರ್ಧನೆ ಅಗತ್ಯ

ಕರ್ನಾಟಕ ರಾಜ್ಯದ ಸಹಕಾರ ಚಳವಳಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದರು. ಸಹಕಾರ ಇಲಾಖೆ ಕಾರ್ಯದರ್ಶಿಗಳು ಸಹಕಾರ ಸಂಘಗಳ ನಿಬಂಧಕರು, ಅಪರ ನಿಬಂಧಕರು, ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆ ಆಶಾದಾಯಕವಾಗಿದೆ. ಒಟ್ಟು 47736 ಸಹಕಾರ ಸಂಘಗಳಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚು ಸಹಕಾರ ಸಂಘಗಳು ನಷ್ಟದಲ್ಲಿರುವುದನ್ನು ಮುಖ್ಯಮಂತ್ರಿಗಳು ಗಮನಿಸಿ, ನಷ್ಟದಲ್ಲಿರುವ ಸಹಕಾರ ಸಂಘಗಳು ಲಾಭದತ್ತ ಮುನ್ನಡೆಯಲು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಬಗ್ಗೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸಲಹೆ ಮಾರ್ಗದರ್ಶನ ನೀಡಿರುವುದು ಸ್ವಾಗತಾರ್ಹ ವಿಚಾರವಾಗಿದೆ.

ಸಹಕಾರ ಸಂಸ್ಥೆಗಳು ಸೇವೆಯ ಜೊತೆಗೆ ಲಾಭದಲ್ಲಿ ಮುನ್ನಡೆದರೆ ಸಹಕಾರ ಚಳವಳಿಯು ಬಲಿಷ್ಠವಾಗಿ ಬೆಳೆದಂತಾಗುತ್ತದೆ. ಸದಸ್ಯರಲ್ಲಿ ಜಾಗೃತಿ ಅರಿವು ಮೂಡಿಸುವುದು ಅಗತ್ಯ. ಸದಸ್ಯರು ಸಾಲ ಪಡೆಯುವ ಸಂದರ್ಭದಲ್ಲಿ ಸಾಲ ಮರುಪಾವತಿ ಬಗ್ಗೆಯೂ ತಿಳುವಳಿಕೆ ಮೂಡಿಸುವುದು ಪ್ರತಿಯೊಂದು ಸಂಘದ ಅಧಿಕಾರಿಗಳ ಜವಾಬ್ದಾರಿಯಾಗಿದೆ.

ಸದಸ್ಯರು ಸಕಾಲದಲ್ಲಿ ಸಾಲ ಪಡೆದು ಆರ್ಥಿಕವಾಗಿ ಸ್ವಾವಲಂಬಿಗಳಾದರೆ ಸಹಕಾರ ತತ್ವಗಳ ಅನುಷ್ಠಾನವಾದಂತೆ. ಇದರಿಂದ ಸಕಾಲದಲ್ಲಿ ಹೊಸ ಸದಸ್ಯರಿಗೂ ಸಾಲ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗಲಿದೆ. ಹಾಗೆಯೇ ದೇಶದ ಹಸಿರು ಕ್ರಾಂತಿಗೆ ಸಹಕಾರ ಸಂಘಗಳ ಕೊಡುಗೆ ಶ್ಲಾಘನೀಯವಾದುದು. ದೇಶದ 32 ಅಪೆಕ್ಸ್ ಬ್ಯಾಂಕುಗಳು 2023–24ನೇ ಸಾಲಿನಲ್ಲಿ 1.73 ಲಕ್ಷ ಕೋಟಿ ಸಾಲ ನೀಡಿ 2691 ಕೋಟಿಗಳಷ್ಟು ಲಾಭಗಳಿಸಿವೆ. ಜೊತೆಗೆ ದೇಶದ 351 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ನೀಡಿರುವ ಸಾಲ ಪ್ರಮಾಣ 1.61 ಲಕ್ಷ ಕೋಟಿ ರೂಗಳಾಗಿದ್ದು 3297 ಕೋಟಿ ರೂ ಲಾಭ ಗಳಿಸಿವೆ ಇದು ಆಶಾದಾಯಕ ಬೆಳವಣಿಗೆಯಾಗಿದೆ.

ಪತ್ತಿನ ಸಹಕಾರ ಸಂಘಗಳ ಸೇವೆಯು ಶ್ಲಾಘನೀಯವಾಗಿದ್ದು ವಿಶೇಷವಾಗಿ ಪತ್ತಿನ ಸಹಕಾರ ಸಂಘಗಳು ಬಹುತೇಕ ಲಾಭದಲ್ಲಿದೆ. ಉಳಿದ ಪತ್ತಿನ ಸಂಘಗಳು ಲಾಭದತ್ತ ಸಾಗಲು ಕ್ರಿಯಾಯೋಜನೆ ಹಾಕಿಕೊಳ್ಳುವುದು ಅಗತ್ಯವಾಗಿದೆ.

ಸಮಸ್ತ ಸಹಕಾರಿ ಬಂಧುಗಳಿಗೆ ನಾಡಹಬ್ಬ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :

**ಶ್ರೀ ಎಸ್. ಚಂದ್ರಶೇಖರ್**

ಸಂಪಾದಕರು :

**ಪ್ರಜ್ವಲ್ ಕೆ.ಎನ್.**

ಮುಖ್ಯಕಾರ್ಯನಿರ್ವಹಣಾಧಿಕಾರಿ


**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034

ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

# ದಿ ಕರ್ನಾಟಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ : ವಾರ್ಷಿಕ ಮಹಾಸಭೆ; 1 ಕೋಟಿ ರೂ. ಲಾಭ : ಡಿ. ಉಮಾಶಂಕರ್




**ಬೆಂಗಳೂರು** : ನಗರದ ವಿಜಯ ನಗರದಲ್ಲಿರುವ ದಿ ಕರ್ನಾಟಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ವಾರ್ಷಿಕ ಮಹಾಸಭೆ ಇತ್ತೀಚೆಗೆ ಸಂಘದ ಅಧ್ಯಕ್ಷರಾದ ಡಿ. ಉಮಾಶಂಕರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ನಂತರ ಅವರು ಮಾತನಾಡಿ, ಸಂಘವು 3872 ಸದಸ್ಯರುಗಳನ್ನು ಹೊಂದಿದ್ದು, 2024–25ನೇ ಸಾಲಿನಲ್ಲಿ 10059728.10 ರೂ.ಗಳ ನಿವ್ವಳ ಲಾಭ ಗಳಿಸಿದೆ. ಸದಸ್ಯರುಗಳಿಗೆ ಶೇಕಡಾ 15 ರಷ್ಟು ಡಿವಿಡೆಂಡ್ ಘೋಷಿಸಲಾಗಿದೆ ಎಂದರು. 2024–25ನೇ ಸಾಲಿನಲ್ಲಿ ಸಂಘದಲ್ಲಿ 16017500.00 ರೂ.ಗಳ ಷೇರು ಬಂಡವಾಳ, 72736116.05 ರೂ.ಗಳ ಆಪದ್ಧನ ಮತ್ತು ಇತರೆ ನಿಧಿಗಳು, 176070105.58 ರೂ.ಗಳ ಠೇವಣಿಗಳು, 27162586.00 ರೂ.ಗಳ ಇತರೆ ಜವಾಬ್ದಾರಿಗಳನ್ನು ಹೊಂದಿದೆ ಎಂದರು.

ಸಂಘದ ಕಾರ್ಯವ್ಯಾಪ್ತಿಯನ್ನು ಮೈಸೂರು ವಿಭಾಗಕ್ಕೆ ವಿಸ್ತರಿಸಲು ಆಡಳಿತ ಮಂಡಳಿ ಯೋಜಿಸಿದೆ ಎಂದು ಅವರು ಈ ಸಂದರ್ಭದಲ್ಲಿ ತಿಳಿಸಿದರು. ಇದೇ ಸಂದರ್ಭದಲ್ಲಿ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಏರ್ಪಡಿಸಲಾಗಿತ್ತು.

ವೇದಿಕೆಯ ಮೇಲೆ ಸಂಘದ ಉಪಾಧ್ಯಕ್ಷರಾದ ಶ್ರೀನಿವಾಸ್, ನಿರ್ದೇಶಕರುಗಳಾದ ಎಂ.ಎಂ. ಕೃಷ್ಣಪ್ಪ, ಮೋಹನ್‌ಕುಮಾರ್ ಡಿ., ಮೂರ್ತಿ ಜಿ.ವಿ., ರಾಮಚಂದ್ರ ಟಿ., ವೆಂಕಟಾಚಲಯ್ಯ ಎಂ., ನಾಗರಾಜ ಕೆ., ಶ್ರೀನಿವಾಸ ಎಂ., ಜಯಲಕ್ಷ್ಮಮ್ಮ ಡಿ., ಉಷಾ ಕೆ.ಎಚ್., ನೇತ್ರಾವತಿ ಬಿ.ಆರ್., ರಾಜುಗೋಪಾಲ ಆರ್. ಅವರುಗಳು ಉಪಸ್ಥಿತರಿದ್ದರು. ಸಂಘದ ಮುಖ್ಯಕಾರ್ಯನಿರ್ವಾಹಕ ಎನ್. ರಾಜು ವಾರ್ಷಿಕ ವರದಿ ಮಂಡಿಸಿದರು.

**ಸುಭಾಷಿತ :** ನೀರಿನಿಂದ ಬಟ್ಟೆಗಳು, ಸತ್ಯದಿಂದ ಮನಸ್ಸು, ಅಹಿಂಸೆಯಿಂದ ಆತ್ಮ, ತಿಳಿವಳಿಕೆಯಿಂದ ಬುದ್ಧಿ ನಿರ್ಮಲವಾಗುತ್ತವೆ. – ಗಾಂಧೀಜಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.

ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.

- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸಮೃದ್ಧ ಭಾರತಕ್ಕೆ ಸ್ವಾವಲಂಬನೆ ಅಗತ್ಯ : ಪ್ರಧಾನಿ ನರೇಂದ್ರ ಮೋದಿ




**ನವದೆಹಲಿ:** 'ಪ್ರಸ್ತುತ ಜಾಗತಿಕವಾಗಿ ಆರ್ಥಿಕ ಸ್ವಾರ್ಥ ಹೆಚ್ಚುತ್ತಿದೆ. ಹೀಗಿರುವಾಗ ಸಮೃದ್ಧ ಭಾರತ ನಿರ್ಮಾಣಕ್ಕೆ ಯುದ್ಧ ವಿಮಾನ, ವಿದ್ಯುತ್ ಚಾಲಿತ ಕಾರುಗಳಿಂದ ಹಿಡಿದು ಕೃತಕ ಬುದ್ಧಿಮತ್ತೆ ತನಕ ಎಲ್ಲಾ ಕ್ಷೇತ್ರಗಳಲ್ಲಿ ಆತ್ಮನಿರ್ಭರರಾಗುವುದು ಅತ್ಯಗತ್ಯ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ದೇಶವಾಸಿಗಳಿಗೆ ಕರೆ ನೀಡಿದ್ದಾರೆ.

79ನೇ ಸ್ವಾತಂತ್ರ್ಯ ದಿನದ ಅಂಗವಾಗಿ ಮಾತನಾಡಿದ ಅವರು, 'ದೇಶವು ಆಮದಿನ ಮೇಲೆ ಹೆಚ್ಚು ಅವಲಂಬಿತವಾಗದೆ ತನ್ನ ಕಾಲಿನ ಮೇಲೆ ತಾನು ನಿಲ್ಲಬೇಕು. ಸಮಸ್ಯೆಯಾದಾಗ ಅಳುವುದನ್ನು ಬಿಟ್ಟು ಧೈರ್ಯದಿಂದ ಎದ್ದುನಿಲ್ಲಬೇಕು' ಎಂದಿದ್ದಾರೆ.

**ಸಮೃದ್ದ ಭಾರತ ನಿರ್ಮಾಣ:** ಅಮೆರಿಕ ಹೇರಿರುವ ಶೇ.50ರಷ್ಟು ತೆರಿಗೆ ದೇಶದ ಹಲವು ಕ್ಷೇತ್ರಗಳ ಮೇಲೆ ವಿಪರೀತ ಪರಿಣಾಮ ಬೀರುವ ಭಯದ ನಡುವೆಯೇ, ಭಾರತ ಅನ್ಯ ದೇಶಗಳ ಮೇಲೆ ಅತಿ ಹೆಚ್ಚು ಅವಲಂಬಿತವಾಗಿರುವ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸುವಂತೆ ಮೋದಿ ಹೇಳಿದ್ದಾರೆ. ಸೆಮಿಕಂಡಕ್ಟರ್, ಸಾಮಾಜಿಕ ಮಾಧ್ಯಮ, ರಸಗೊಬ್ಬರ, ಔಷಧಿಗಳನ್ನು ಸ್ವದೇಶಿ, ಸ್ವಾವಲಂಬಿಯಾಗಿ ಉತ್ಪಾದಿಸಬೇಕು. ಸ್ವಾವಲಂಬನೆ ಮತ್ತು ವೋಕಲ್ ಫಾರ್ ಲೋಕಲ್ (ಸ್ಥಳೀಯ ಉತ್ಪಾದನೆಗೆ ಉತ್ತೇಜನ) ಸೇರಿಕೊಂಡು ಸಮೃದ್ದ ಭಾರತವನ್ನು ನಿರ್ಮಿಸಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಔಷಧದಲ್ಲಿ ಸಂಶೋಧನೆ:** 'ಈಗಾಗಲೇ ಭಾರತವು ಜಗತ್ತಿನ ಔಷಧಾಲಯ ಎಂದು ಕರೆಸಿಕೊಳ್ಳುತ್ತಿದೆ. ಆದರೆ ಇಷ್ಟಕ್ಕೇ ಸುಮ್ಮನಾಗದೆ, ನಮ್ಮದೇ ಆದ ಪೇಟೆಂಟ್ ಪಡೆಯಲು ಔಷಧಗಳ ಸಂಶೋಧನೆ ಮತ್ತು ಅಭಿವೃದ್ಧಿಯತ್ತ ಗಮನ ಕೊಡಬೇಕು. ರೋಗ–ರುಜಿನಗಳು ಬಂದಾಗ ಯಾವುದೇ ಅಡ್ಡಪರಿಣಾಮಗಳಿಲ್ಲದ, ಮಾನವ ಸಂಕುಲಕ್ಕೆ ನೆರವಾಗಬಹುದಾದಂತಹ ಕಡಿಮೆ ಬೆಲೆಯ ಮತ್ತು ಪರಿಣಾಮಕಾರಿ ಔಷಧಗಳನ್ನು ಕಂಡುಹಿಡಿಯಬೇಕು' ಎಂದು ಮೋದಿ ಹೇಳಿದರು.

**ರಸಗೊಬ್ಬರ ಆಮದು ತಗ್ಗಿಸಿ:** 'ರಸಗೊಬ್ಬರಗಳನ್ನು ಕಡಿಮೆ ಬಳಸಿ. ಇದರಿಂದ ಮಣ್ಣಿನ ಫಲವತ್ತತೆ ನಾಶ ಕ್ಷೀಣಿಸುವುದಲ್ಲದೆ, ಅದರ ಆಮದಿನ ಮೇಲೆ ಅಪಾರ ವಿದೇಶಿ ವಿನಿಮಯವನ್ನು ಖರ್ಚು ಮಾಡುವುದು ತಪ್ಪುತ್ತದೆ' ಎಂದು ಕಿವಿಮಾತು ಹೇಳಿದರು. ಜತೆಗೆ, ದೇಶದಲ್ಲೇ ರಸಗೊಬ್ಬರ ಉತ್ಪಾದನೆಯಲ್ಲಿ ಸಶಕ್ತರಾಗಲು ಯುವಕರು, ಕೈಗಾರಿಕೆಗಳಿಗೆ ಕರೆ ನೀಡಿದರು.

**ರೈತರ ಹಿತರಕ್ಷಣೆಗೆ ಬದ್ಧ:** 'ರೈತರು, ಜಾನುವಾರು ಸಾಕಣಿಕೆದಾರರು, ಮೀನುಗಾರರ ಹಿತದೊಂದಿಗೆ ಭಾರತ ರಾಜಿ ಮಾಡಿಕೊಳ್ಳುವುದಿಲ್ಲ. ಅವರನ್ನು ಗುರಿಯಾಗಿಸಿ ವಿಧಿಸಲಾಗುವ ನೀತಿಗಳ ಎದುರು ಮೋದಿ ತಡೆಗೋಡೆಯಂತೆ ನಿಂತಿದ್ದಾರೆ. ಅವರೆಲ್ಲರ ಹಿತರಕ್ಷಣೆಗೆ ಬದ್ಧರಾಗಿದ್ದೇವೆ' ಎಂದು ಪ್ರಧಾನಿ ಪುನರುಚ್ಚರಿಸಿದ್ದಾರೆ. ಅಮೆರಿಕ ತನ್ನ ಕೃಷಿ ಉತ್ಪನ್ನಗಳನ್ನು ಭಾರತದ ಮಾರುಕಟ್ಟೆಗಳಲ್ಲಿ ಸುರಿಯಲು ಅನುವು ಮಾಡಿಕೊಡುವಂತೆ ಮನವಿ ಮಾಡುತ್ತಿರುವ ಹೊತ್ತಲ್ಲೇ, ಅದು ಸಾಧ್ಯವಿಲ್ಲ ಎಂದು ಮೋದಿ ಸ್ಪಷ್ಟ ಮಾತುಗಳಲ್ಲಿ ಹೇಳಿದರು.

**ಅಂಗಡಿಗಳಲ್ಲಿ ಸ್ವದೇಶಿ ಉತ್ಪನ್ನಗಳ ಬೋರ್ಡ್ ಹಾಕಿರಿ: ವರ್ತಕರಿಗೆ ಕರೆ :** 'ವ್ಯಾಪಾರಿಗಳು, ಅಂಗಡಿ ಮಾಲೀಕರು ಆದಷ್ಟು ಸ್ವದೇಶಿ ಉತ್ಪನ್ನಗಳನ್ನು ಜನರಿಗೆ ಮಾರಾಟ ಮಾಡಿ. ಹಾಗೂ ತಮ್ಮ ವ್ಯಾಪಾರಿ ಸ್ಥಳಗಳಲ್ಲಿ ಈ ಕುರಿತು ಬೋರ್ಡ್‌ಗಳನ್ನು ಅಳವಡಿಸಿ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಅಂಗಡಿಯವರು, ವ್ಯಾಪಾರಿಗಳು ಮುಂದೆ ಬಂದು ತಮ್ಮ ವ್ಯಾಪಾರ ಸ್ಥಳಗಳಲ್ಲಿ ಸ್ವದೇಶಿ ಉತ್ಪನ್ನಗಳನ್ನು ಇಲ್ಲಿ ಮಾರಲಾಗುತ್ತದೆ ಎಂದು ಬೋರ್ಡ್‌ಗಳಲ್ಲಿ ಬರೆದು ಪ್ರಚಾರ ಮಾಡಬೇಕು. ಇದು ನಿಮ್ಮ ಜವಾಬ್ದಾರಿ ಕೂಡ. ನಾವು ಸ್ವದೇಶಿ ಬಗ್ಗೆ ಹೆಮ್ಮೆ ಪಡಬೇಕು, ಅಳವಡಿಸಬೇಕು. ಬಲವಂತದಿಂದಲ್ಲ. ಬದಲಾಗಿ ನಮ್ಮ ಶಕ್ತಿಯಾಗಿ' ಎಂದರು.

# ತಲಾ ಆದಾಯ ಹೆಚ್ಚಿಸಿದ ಗ್ಯಾರಂಟಿ ಯೋಜನೆಗಳು – ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು:** 'ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಜನರ ತಲಾ ಆದಾಯ ಹೆಚ್ಚಿದ್ದು, ರಾಜ್ಯವು ತಲಾ ಆದಾಯದಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಮಾಣಿಕ್ ಷಾ ಮೈದಾನದಲ್ಲಿ ನಡೆದ 79ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ, ಸರ್ಕಾರದ ನೀತಿಗಳು, ಅಭಿವೃದ್ಧಿ ಯೋಜನೆಗಳ ಜಾರಿ, ಆಶಯಗಳನ್ನು ಬಿಡಿಸಿಟ್ಟರು.

'ಕರ್ನಾಟಕವು ಈಗ ತಲಾ ಆದಾಯದ ವಿಚಾರದಲ್ಲಿ ಮೊದಲ ಸ್ಥಾನದಲ್ಲಿದೆ. ತಲಾ ಆದಾಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಶೇ. 101 ರಷ್ಟು ಪ್ರಗತಿಯನ್ನು ಸಾಧಿಸಿದ ರಾಜ್ಯ ಕರ್ನಾಟಕವಾಗಿದೆ. 2013–14 ರಲ್ಲಿ ಸ್ಥಿರ ದರಗಳಲ್ಲಿ ರೂ. 1,01,858 ಗಳಷ್ಟಿದ್ದ ತಲಾದಾಯವು 2024–25ರ ವೇಳೆಗೆ ರೂ. 2,04,605 ಗೆ ತಲುಪಿದೆ' ಎಂದು ತಿಳಿಸಿದರು.

'ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಯೋಜನೆಗಳಿಗೆ ಈವರೆಗೆ ರೂ. 96 ಸಾವಿರ ಕೋಟಿಗೂ ಹೆಚ್ಚಿನ ಮೊತ್ತವನ್ನು ವಿನಿಯೋಗಿಸಿದ್ದೇವೆ. ಮಧ್ಯವರ್ತಿಗಳ ಹಾವಳಿಯಿಲ್ಲದೆ ಜನರಿಗೆ ತಲುಪುವ ಯೋಜನೆಗಳು ರಾಜ್ಯದ ಜನರ ತಲಾ ಆದಾಯದ ಜತೆಗೆ ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಶೇ. 23 ರಷ್ಟು ಹೆಚ್ಚಿಸಿವೆ ಎಂದು ಹಲವು ಅಧ್ಯಯನಗಳು ಹೇಳುತ್ತಿವೆ' ಎಂದು ಹೇಳಿದರು.

'ಗ್ಯಾರಂಟಿ ಯೋಜನೆಗಳಿಗೆ ಎರಡು ವರ್ಷದಲ್ಲಿ ಸರ್ಕಾರ ಬಲ ತುಂಬಿದೆ. ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಹೆಚ್ಚಿ, ತಲಾ ಆದಾಯದಲ್ಲೂ ಏರಿಕೆ ಕಂಡಿದೆ' ಎಂದು ಯೋಜನೆಗಳನ್ನು ಸಮರ್ಥಿಸಿಕೊಂಡರು. 'ಸರ್ಕಾರವು ಗ್ಯಾರಂಟಿ ಯೋಜನೆಗಳೂ ಸೇರಿದಂತೆ ಸಹಾಯಧನ, ಪ್ರೋತ್ಸಾಹಧನ, ವಿದ್ಯಾರ್ಥಿವೇತನ, ಸಾಮಾಜಿಕ ಯೋಜನೆಗಳಿಗಾಗಿ ವಿನಿಯೋಗಿಸುತ್ತಿರುವ ಪಿಂಚಣಿ ಮುಂತಾದವುಗಳಿಗಾಗಿ ರೂ. 1.12 ಲಕ್ಷ ಕೋಟಿಗಳಿಗೂ ಹೆಚ್ಚಿನ ಮೊತ್ತವನ್ನು ಜನ ಕಲ್ಯಾಣಕ್ಕಾಗಿ ಖರ್ಚು ಮಾಡುತ್ತಿದೆ. ಕಲ್ಯಾಣ ಕಾರ್ಯಕ್ರಮಗಳ ಜತೆ ಬಂಡವಾಳ ವೆಚ್ಚಗಳಿಗೆ ಈ ವರ್ಷ ರೂ. 83,200 ಕೋಟಿ ವಿನಿಯೋಗಿಸುತ್ತಿದ್ದೇವೆ' ಎಂದು ವಿವರಿಸಿದರು.

'ಬಸವಾದಿ ಶರಣರ ಧ್ಯೇಯದಲ್ಲಿ ನಂಬಿಕೆಯಿತ್ತು. ರಾಜ್ಯವು ಅಭಿವೃದ್ಧಿ ಮಾದರಿಗಳನ್ನು ಹುಟ್ಟು ಹಾಕಿದೆ. ಇದಕ್ಕೆ 'ಕರ್ನಾಟಕ ಅಭಿವೃದ್ಧಿ ಮಾದರಿ' ಎಂಬ ಹೆಸರಿನಲ್ಲಿ ಮನ್ನಣೆ ದೊರೆತಿದೆ. ವಿಶ್ವಸಂಸ್ಥೆ ಮುಖ್ಯಸ್ಥ ಫಿಲೆಮಾನ್ ಯಾಂಗ್ರ ಅವರು ಗ್ಯಾರಂಟಿ ಯೋಜನೆಗಳ ಬಗ್ಗೆ ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಈ ಮೂಲಕ ಯೋಜನೆಗಳು ವಿಶ್ವಮಾನ್ಯಗೊಂಡಿವೆ' ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.



'ಬಲಾಢ್ಯರು ಮಾತ್ರ ಬದುಕಿ, ಉಳಿದವರು ಗುಲಾಮರಾಗಿ, ಬಲಾಢ್ಯರಿಗಾಗಿ ದುಡಿಯಬೇಕು ಎನ್ನುವ ಮನುವಾದಿ ಸಿದ್ಧಾಂತದ ಮಾದರಿಯೇ ಸಾಮಾಜಿಕ ಡಾರ್ವಿನ್ ವಾದ. ಈ ಮೃಗೀಯ ಸಿದ್ಧಾಂತಕ್ಕೆ ಎದುರಾಗಿ ಅಸಹಾಯಕರಿಗೆ ಮೊದಲು ಆದ್ಯತೆ ಸಿಗಬೇಕು ಎನ್ನುವುದು ನಮ್ಮ ಸಂವಿಧಾನ ವಾದ. ಆದ್ದರಿಂದ ನಾವು ಸಂವಿಧಾನದ ಉಳಿವಿಗಾಗಿ ಪಣ ತೊಡೋಣ' ಎಂದು ಕರೆ ನೀಡಿದರು.

### ಬೆಂಗಳೂರಿಗೆ ರೂ. 1.35 ಲಕ್ಷ ಕೋಟಿ

ಸರ್ಕಾರವು ಎರಡು ವರ್ಷದಲ್ಲಿ ಬೆಂಗಳೂರು ನಗರಾಭಿವೃದ್ಧಿಗಾಗಿ ಸುಮಾರು ರೂ. 1.35 ಲಕ್ಷ ಕೋಟಿಗೂ ಹೆಚ್ಚಿನ ವಎಚ್ಚ ಮಾಡಲು ಮುಂದಾಗಿದೆ. ಮುಖ್ಯವಾಗಿ ಯೋಜನೆ, ಹೊಸ ಮೆಟ್ರೋ ರೈಲು ಮಾರ್ಗಗಳು, ಡಬಲ್ ಡೆಕ್ಕರ್ ರಸ್ತೆಗಳು, ಸುರಂಗ ರಸ್ತೆಗಳು, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್, ವೈಟ್‌ಟಾಪಿಂಗ್ ರಸ್ತೆಗಳು, 6ನೇ ಹಂತದ ಕಾವೇರಿ ನೀರು ಸರಬರಾಜು ಬಫರ್ ರಸ್ತೆ, ಮೇಲ್ಸೇತುವೆ, ಉತ್ತರ–ದಕ್ಷಿಣ ಹಾಗೂ ಪೂರ್ವ–ಪಶ್ಚಿಮ ಕಾರಿಡಾರ್, ಸಾರ್ವಜನಿಕ ಪಾರ್ಕಿಂಗ್ ವ್ಯವಸ್ಥೆ, ಶಿಕ್ಷಣ–ಆರೋಗ್ಯ ವ್ಯವಸ್ಥೆ ಸುಧಾರಣೆ, ಟ್ರಾಫಿಕ್ ನಿರ್ವಹಣೆ ಸೇರಿದ್ದು ಕೆಲವು ಚಾಲನೆಗೊಂಡಿವೆ ಎಂದು ಸಿದ್ದರಾಮಯ್ಯ ವಿವರಿಸಿದರು.

# ಅಪೆಕ್ಸ್ ಬ್ಯಾಂಕಿಗೆ ಕೇಂದ್ರ ಸಹಕಾರ ಸಚಿವಾಲಯ ಕಾರ್ಯದರ್ಶಿ ಆಶಿಶ್‌ಕುಮಾರ್ ಭೂತಾನಿ ಭೇಟಿ



**ಬೆಂಗಳೂರು:** ಕೇಂದ್ರ ಸಹಕಾರ ಸಚಿವಾಲಯದ ಕಾರ್ಯದರ್ಶಿ ಆಶಿಶ್ ಕುಮಾರ್ ಭೂತಾನಿ ಅವರು ಕಳೆದವಾರ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ಭೇಟಿ ನೀಡಿದ್ದರು.

ಶ್ರೀಯುತರನ್ನು ರಾಜ್ಯದ ಸಹಕಾರ ಇಲಾಖೆಯ ಕಾರ್ಯದರ್ಶಿ ಸಂಜಯ್ ಬಿ. ಶೆಟ್ಟಣ್ಣವರ್ ಅವರು ಸ್ವಾಗತಿಸಿದರು.

ಅಪೆಕ್ಸ್ ಬ್ಯಾಂಕಿನಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸರ್ಕಾರದ ಸಹಕಾರ ಇಲಾಖೆಯ ಪುರಸ್ಕೃತ ಯೋಜನೆಗಳು ಮತ್ತು ಅವುಗಳ ಅನುಷ್ಠಾನ ಕುರಿತು ರಾಜ್ಯದ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಅಪೆಕ್ಸ್ ಬ್ಯಾಂಕಿನ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಅಪೆಕ್ಸ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಸಿ.ಎನ್. ದೇವರಾಜ್, ಸಹಕಾರ ಸಂಘಗಳ ಅಪರ ನಿಬಂಧಕರಾದ (ಪತ್ತು) ಹೆಚ್. ಬಾಲಶೇಖರ್, ನಬಾರ್ಡ್ ಪ್ರಾಂತೀಯ ಕಚೇರಿ ಪ್ರಧಾನ ವ್ಯವಸ್ಥಾಪಕರಾದ ಪ್ರಕಾಶ್ ಸಿ. ದಾಸ್, ನಿಬಂಧಕರ ಕಚೇರಿಯ ಕಾನೂನು ಕೋಶ ನಿಬಂಧಕರಾದ ಸುರೇಶ್‌ಗೌಡ, ಬೆಂಗಳೂರು ಪ್ರಾಂತ್ಯ ಜಂಟಿ ನಿಬಂಧಕರಾದ ಡಾ. ಜಿ. ಉಮೇಶ್, ಬೆಂಗಳೂರು ಡಿಸಿಸಿ ಬ್ಯಾಂಕ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಪುಂಡಲೀಕ ಸಾಧುರೆ, ಎನ್.ಸಿ.ಡಿ.ಸಿ. ಪ್ರಾಂತೀಯ ನಿರ್ದೇಶಕ ತನೀಶ ಲಾಲ್, ಉಪನಿಬಂಧಕರುಗಳಾದ ಪಿ. ಶಶಿಧರ್, ಬಿ.ಕೆ. ಸಲೀಮ್, ಅಶ್ವಿನಿ ವೈ.ಟಿ, ಅಪೆಕ್ಸ್ ಬ್ಯಾಂಕಿನ ಅಧಿಕಾರಿ ಸಜ್ಜನ್ ಅವರುಗಳು ಉಪಸ್ಥಿತರಿದ್ದರು.

ದೇಶದಲ್ಲಿ ಹೊಸದಾಗಿ 2 ಲಕ್ಷ ಪ್ರಾಥಮಿಕ ಸಹಕಾರ ಸಂಘಗಳ ಸ್ಥಾಪನೆ ಗುರಿ ಹೊಂದಲಾಗಿದ್ದು, ಈ ಸಭೆಯಲ್ಲಿ ಪ್ರಮುಖವಾಗಿ ಹೊಸದಾಗಿ ಬಹುಸೇವಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ಮೀನುಗಾರರ ಸಹಕಾರ ಸಂಘಗಳನ್ನು ಅಗತ್ಯವಿರುವೆಡೆ ರಾಜ್ಯದಲ್ಲಿ ಸ್ಥಾಪಿಸಿ, ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸುವುದರ ಕುರಿತು ಕೇಂದ್ರ ಸಹಕಾರ ಇಲಾಖೆ ಕಾರ್ಯದರ್ಶಿ ಆಶಿಶ್ ಭೂತಾನಿ ಅವರು ಚರ್ಚಿಸಿದರು.

ನಷ್ಟದಲ್ಲಿರುವ ಹಾಗೂ ಸಮಾಪನೆಯಾಗಿರುವ ಹಾಲು ಉತ್ಪಾದಕರ ಸಂಘಗಳನ್ನು ಪುನಃಶ್ಚೇತನಗೊಳಿಸುವುದು, ರಾಜ್ಯದ ಎಲ್ಲಾ ಹಾಲು ಉತ್ಪಾದಕ ಸಂಘಗಳು ಸ್ಥಳೀಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಖಾತೆಗಳನ್ನು ಹೊಂದುವುದರ ಮೂಲಕ ವ್ಯವಹಾರ ನಡೆಸುವುದರ ಜೊತೆಗೆ ಪರಸ್ಪರ ಸಹಕಾರ ತತ್ವಗಳನ್ನು ಅನುಷ್ಠಾನಗೊಳಿಸಲು ಸಲಹೆ ಮಾಡಿದರು. ಪ್ಯಾಕ್ಸ್‌ಗಳು ಬಲವರ್ಧನೆಗೊಳ್ಳಲು ಸಾಮಾನ್ಯ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುವುದು, ವಿಶ್ವದ ಅತಿದೊಡ್ಡ ಧಾನ್ಯ ಸಂಗ್ರಹಣಾ ಯೋಜನೆಗೆ ನೆರವಾಗುವುದು, ಜನೌಷಧಿ ಕೇಂದ್ರಗಳನ್ನು ಸ್ಥಾಪಿಸುವುದು, ಪ್ಯಾಕ್ಸ್‌ಗಳ ಗಣಕೀಕರಣ, ಅಂತಾರಾಷ್ಟ್ರೀಯ ಸಹಕಾರ ವರ್ಷಾಚರಣೆ ಸೇರಿದಂತೆ ಕೇಂದ್ರ ಸಹಕಾರ ಸಚಿವಾಲಯ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಸಲಹೆ ಮಾಡಿದರು.



# ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಂದ ಸಹಕಾರ ಇಲಾಖೆಯ ಪ್ರಗತಿ ಪರಿಶೀಲನೆ : ಸಕಾಲದಲ್ಲಿ ರೈತರಿಗೆ ಬೆಳೆಸಾಲ ನೀಡಲು ಸೂಚನೆ




**ಬೆಂಗಳೂರು:** ಆಗಸ್ಟ್ 28 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗೃಹ ಕಚೇರಿ ಕೃಷ್ಣಾದಲ್ಲಿ ಸಹಕಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯು ನಡೆಯಿತು. ರಾಜ್ಯದಲ್ಲಿ ಸಹಕಾರಿ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಹಕಾರ ಇಲಾಖೆ ಅಧಿಕಾರಿಗಳು ಕಾನೂನು ಪ್ರಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಮಾಹಿತಿಗಳನ್ನು ಪಡೆದು, ನಂತರ ಮಾತನಾಡುತ್ತಾ, ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ 37ಲಕ್ಷ ರೈತರಿಗೆ ರೂ.28 ಸಾವಿರ ಕೋಟಿ ಸಾಲ ವಿತರಣೆ ಗುರಿ ಹೊಂದಲಾಗಿದ್ದು, ಜುಲೈ ಅಂತ್ಯದವರೆಗೆ 8,69,284 ರೈತರಿಗೆ ರೂ. 8362.68 ಕೋಟಿ ಸಾಲ ವಿತರಣೆ ಮಾಡಲಾಗಿದೆ. ರೈತರಿಗೆ ಸಕಾಲದಲ್ಲಿ ಕೃಷಿ ಸಾಲವನ್ನು ಸಿಗುವುದನ್ನು ಖಾತ್ರಿಪಡಿಸಬೇಕು ಎಂದು ತಿಳಿಸಿದರು.

ನಬಾರ್ಡ್ ರಿಯಾಯಿತಿ ಬಡ್ಡಿ ದರದ ಪುನರ್ಧನ ಸಾಲದ ಮಿತಿಯನ್ನು ಹಿಂದಿನ ಸಾಲಿನಲ್ಲಿದ್ದ ರೂ.5,600 ಕೋಟಿಗಳಿಂದ ರೂ.3,236.11 ಕೋಟಿಗೆ ಅಂದರೆ ಶೇ.42.21ರಷ್ಟು ಕಡಿಮೆ ಮಾಡಿದೆ. ಆದರೂ ಸಾಲ ವಿತರಣೆಯಲ್ಲಿ ಶೇ.96.07 ರಷ್ಟು ಪ್ರಗತಿ ಸಾಧಿಸಲಾಗಿದೆ. 2024-25ನೇ ಸಾಲಿನಲ್ಲಿ 29,75,598 ರೈತರಿಗೆ 25,939.09 ಕೋಟಿ ಕೃಷಿ ಸಾಲ ವಿತರಣೆ ಮಾಡಲಾಗಿದೆ ಎಂದರು.

ರಾಜ್ಯದಲ್ಲಿ 28516 ಸಹಕಾರ ಸಂಘಗಳು ಲಾಭದಲ್ಲಿದ್ದು, 14,670 ಸಂಘಗಳು ನಷ್ಟದಲ್ಲಿವೆ. ಸಾಲ ವಸೂಲಾತಿ ಸರಿಯಾಗಿ ಆಗದ ಕಾರಣ ಬಹುತೇಕ ಸಂಘಗಳು ನಷ್ಟದಲ್ಲಿದ್ದು, ಅಂತಹ ಸಾಲ ವಸೂಲಾತಿಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕು. ಇದರಲ್ಲಿ 2200 ಹಾಲು ಉತ್ಪಾದಕ ಸಂಘಗಳು ನಷ್ಟದಲ್ಲಿವೆ. ಹಾಲು ಉತ್ಪಾದಕ ಸಹಕಾರ ಸಂಘಗಳ ವೆಚ್ಚದ ಮೇಲೆ ನಿಗಾ ಇರಿಸಬೇಕು. ಹಾಲು ಉತ್ಪಾದನೆಯನ್ನು ಹೆಚ್ಚಿಸುವುದು ಸಂಘಗಳ ಕಾರ್ಯದರ್ಶಿಗಳ ಜವಾಬ್ದಾರಿ. ಹಾಲು ಉತ್ಪಾದಕ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಸಹಕಾರ ಇಲಾಖೆಯಲ್ಲಿ ಸಹಕಾರ ಸಂಘಗಳ ಹಿರಿಯ ನಿರೀಕ್ಷಕರ 126 ಹುದ್ದೆಗಳು ಹಾಗೂ ಸಹಕಾರ ಸಂಘಗಳ ನಿರೀಕ್ಷಕರ 403 ಹುದ್ದೆಗಳು ಖಾಲಿ ಇರುವ ಬಗ್ಗೆ ಮಾಹಿತಿ ಪಡೆದ ಮುಖ್ಯಮಂತ್ರಿಗಳು ಹುದ್ದೆಗಳ ಭರ್ತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.



# ನೂತನ ರಾಷ್ಟ್ರೀಯ ಸಹಕಾರ ನೀತಿ - 2025 : ಕುರಿತು ವಿಚಾರ ಸಂಕಿರಣ

**ಬೆಂಗಳೂರು:** ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆಯು ಶ್ರೀ ತ್ಯಾಗರಾಜ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದರ ಸಹಯೋಗದೊಂದಿಗೆ ಶ್ರೀ ತ್ಯಾಗರಾಜ ಸಹಕಾರ ಬ್ಯಾಂಕ್‌ನ ಸಭಾಂಗಣದಲ್ಲಿ ರಾಷ್ಟ್ರೀಯ ಸಹಕಾರ ನೀತಿ 2025 ಇದರ ಅನುಷ್ಠಾನ – ತಂತ್ರಗಾರಿಕೆ ಮತ್ತು ಭಾರತ ಸರ್ಕಾರ ಸಹಕಾರ ಚಳವಳಿಯನ್ನು ಬಲಪಡಿಸಲು ಕೈಗೊಂಡಿರುವ ಉಪಕ್ರಮಗಳ ಬಗ್ಗೆ ಕಾರ್ಯಗಾರ ಏರ್ಪಡಿಸಲಾಗಿತ್ತು.

ಕಾರ್ಯಗಾರವನ್ನು ಶ್ರೀ ತ್ಯಾಗರಾಜ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಎಂ.ಆರ್. ವೆಂಕಟೇಶ್‌ರವರು ಉದ್ಘಾಟಿಸಿ ತಮ್ಮ ಬ್ಯಾಂಕ್ ತಮ್ಮ ಸದಸ್ಯರ ಮತ್ತು ಸಿಬ್ಬಂದಿಗೆ ನಿರಂತರ ತರಬೇತಿ ಕಾರ್ಯಕ್ರಮಗಳನ್ನು ನಡೆಸಿ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ, ಬ್ಯಾಂಕಿನ ಶ್ರೇಯೋಭಿವೃದ್ಧಿಗಾಗಿ ಸುಸಜ್ಜಿತ ಸಭಾಂಗಣ ನಿರ್ಮಾಣ ಮಾಡಿದ್ದು ಅದರ ಉಪಯುಕ್ತತೆ ಬಗ್ಗೆ ತಿಳಿಸಿದರು. ನೂತನವಾಗಿ ಅನಾವರಣಗೊಂಡಿರುವ ರಾಷ್ಟ್ರೀಯ ಸಹಕಾರ ನೀತಿಯು ಮುಂದಿನ 20 ವರ್ಷಗಳ ಕಾಲ ಭಾರತದ ಸಹಕಾರ ಚಳವಳಿಯ ಆರ್ಥಿಕ ಬೆಳವಣಿಗೆಗೆ ಉದ್ಯೋಗಸೃಷ್ಟಿ ಸೇರಿದಂತೆ ಶ್ವೇತಕ್ರಾಂತಿ, ಹಸಿರು ಕ್ರಾಂತಿಗೂ ಕಾರಣವಾಗಲಿದೆ ಎಂದರು.

ಕರ್ನಾಟಕ ತೋಟಗಾರಿಕೆ ಮಹಾಮಂಡಳದ ಅಧ್ಯಕ್ಷರಾದ ಬಿ.ಡಿ. ಭೂಕಾಂತ ರವರು ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆ ಕುರಿತು ಮಾತನಾಡಿದರು. ನಿವೃತ್ತ ಅಪರ ನಿಬಂಧಕರಾದ ಶಶಿಧರ ಎಲೆ ರವರು ರಾಷ್ಟ್ರೀಯ ಸಹಕಾರ ನೀತಿಯ ಪ್ರಾಮುಖ್ಯತೆ ಅದರಲ್ಲಿ ವಿವರಿಸಿದಂತೆ ಅನುಷ್ಠಾನದ ಕಾರ್ಯತಂತ್ರದ ಬಗ್ಗೆ ವಿವರಿಸಿ 2047 ಕ್ಕೆ ವಿಕಸಿತ ಭಾರತ ದ ಪರಿಕಲ್ಪನೆ ಅದರಲ್ಲಿ ಸಹಕಾರ ಹೇಗೆ ತನ್ನ ಪಾತ್ರ ನಿರ್ವಹಿಸಬೇಕಾಗುತ್ತದೆ ಎಂಬುದನ್ನು ವಿವರಿಸಿದರು.

ನಿವೃತ್ತ ಅಪರ ನಿಬಂಧಕರಾದ ಡಾ. ಗುರುಸ್ವಾಮಿ ಯವರು ಸಹಕಾರ ನೀತಿ ಯನ್ನೂ ಒಳಗೊಂಡಂತೆ ಭಾರತ ಸರ್ಕಾರ ತೆಗೆದುಕೊಂಡಿರುವ



ಉಪಕ್ರಮಗಳ ಬಗ್ಗೆ, ರಾಷ್ಟ್ರಮಟ್ಟದಲ್ಲಿ ಮೂರು ಸಹಕಾರ ಸಂಸ್ಥೆಗಳ ನಿರ್ಮಾಣ, ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆ, ಪಾಕ್ಸ್‌ಗಳಿಂದ ಕೈಗೊಳ್ಳ ಬಹುದಾದ ಚಟುವಟಿಕೆಗಳಿಗೆ ಪ್ರೋತ್ಸಾಹ ಮುಂತಾದ ಕ್ರಮಗಳ ಬಗ್ಗೆ ಅಂಕಿ ಅಂಶಗಳ ಸಹಿತ ಮಾಹಿತಿ ನೀಡಿ 'ಸಹಕಾರದಿಂದ ಸಮೃದ್ಧಿ' ಹೇಗೆ ಸಾಧ್ಯ, ಭಾರತ ಸರ್ಕಾರದ ಈ ಘೋಷವಾಕ್ಯದ ಬಗ್ಗೆ ಬೆಳಕು ಚೆಲ್ಲಿದರು. ಹಾಜರಿದ್ದ ವಿವಿಧ ಸಹಕಾರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ನಿರ್ದೇಶಕರುಗಳು ಸಂವಾದದಲ್ಲಿ ಪಾಲ್ಗೊಂಡು ಸಹಕಾರ ಚಳುವಳಿ ಬೆಳವಣಿಗೆ ಅದಕ್ಕೆ ತಕ್ಕ ಪರಿಸರ ನಿರ್ಮಾಣಕ್ಕೆ ಅಗತ್ಯ ವಿವಿಧ ಭಾಗೀಧಾರರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಪ್ರಶ್ನೋತ್ತರ ರೀತಿಯಲ್ಲಿ ಚರ್ಚಿಸಿ ಚಿಂತನ–ಮಂಥನ ನಡೆಸಲಾಯಿತು.

ವೇದಿಕೆಯ ಅಧ್ಯಕ್ಷರು, ನಿವೃತ್ತ ಅಪರ ನಿಬಂಧಕರಾದ ಬಸವೇಗೌಡ ರವರು ಅಧ್ಯಕ್ಷೀಯ ಭಾಷಣ ನೆರವೇರಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ನಿವೃತ್ತ ಅಪರ ನಿಬಂಧಕರಾದ ಹೆಚ್. ಎಸ್. ನಾಗರಾಜಯ್ಯ ರವರು ಸ್ವಾಗತ ಕೋರಿ ವೇದಿಕೆಯ ಪರಿಚಯ, ಧ್ಯೇಯೋದ್ದೇಶಗಳು, ವಿಶ್ವಾದ್ಯಾಂತ ಪ್ರಸಕ್ತ ಸಹಕಾರ ಚಳುವಳಿಯ ಪ್ರಸ್ತುತತೆ ಬಗ್ಗೆ ವಿವರಿಸಿ, ಸಂವಾದ ಗೋಷ್ಠಿಯಲ್ಲಿ ಸ್ಪಷ್ಟೀಕರಣಗಳನ್ನು ಒದಗಿಸಿದರು. ವೀರಣ್ಣ ನಿರ್ದೇಶಕರು ಶ್ರೀ ತ್ಯಾಗರಾಜ ಸಹಕಾರ ಬ್ಯಾಂಕ್ ರವರು ವಂದನಾರ್ಪಣೆ ಸಲ್ಲಿಸಿದರು.

ಸಹಕಾರ ಸಂಘಗಳ ನಿಬಂಧಕರ ಕಚೇರಿಯ ವ್ಯಾಪ್ತಿಯ ಸೇವೆಗಳನ್ನು ಗಣಕೀಕರಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದ ಮುಖ್ಯಮಂತ್ರಿಗಳು, ರಾಜ್ಯದಲ್ಲಿ 7074 ಗಿರವಿದಾರ ಸಂಸ್ಥೆಗಳು ಹಾಗೂ 1468 ಚೀಟಿ ಸಂಸ್ಥೆಗಳು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ 1961, ಕರ್ನಾಟಕ ಗಿರವಿದಾರರ ಅಧಿನಿಯಮ 1961 ಮತ್ತು ಚೀಟಿನಿಧಿಗಳ ಅಧಿನಿಯಮ 1982ರಡಿ ನೋಂದಣಿಯಾಗಿವೆ. ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಗಿರವಿದಾರ ಸಂಸ್ಥೆಗಳು ಹಾಗೂ ಚೀಟಿ ಸಂಸ್ಥೆಗಳ ಮೇಲೆ ನಿಗಾ ಇರಿಸಬೇಕು ಎಂದರು.

ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರ ಪೊನ್ನಣ್ಣ, ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿ ಎಸ್. ಜಿಯಾವುಲ್ಲಾ, ಸಹಕಾರ ಇಲಾಖೆಯ ಕಾರ್ಯದರ್ಶಿ ಎಸ್.ಬಿ. ಶೆಟ್ಟಣ್ಣವರ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಹೆಚ್. ಎಂ. ಕುಮಾರ್, ಅಪರ ನಿಬಂಧಕರುಗಳಾದ ಎ.ಸಿ. ದಿವಾಕರ್, ಹೆಚ್. ಬಾಲಶೇಖರ್, ಲಕ್ಷ್ಮೀಪತಯ್ಯ, ಜಂಟಿ ನಿಬಂಧಕರುಗಳಾದ ಎಂ. ವೆಂಕಟೇಶ್, ಯಶಸ್ವಿನಿ, ಡಾ. ಸುರೇಶ್‌ಗೌಡ, ಲೆಕ್ಕಪರಿಶೋಧನಾ ಇಲಾಖೆಯ ಹಿರಿಯ ಅಧಿಕಾರಿಗಳಾದ ಜನಾರ್ಧನ್, ಸಾಧನಾ ಗಾಂವಕರ್, ಉಪನಿಬಂಧಕರಾದ ವೈ.ಟಿ. ಅಶ್ವಿನಿ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೂರು ದಶಕಗಳ ಸಾರ್ಥಕ ಸೇವೆಯಲ್ಲಿ...
# ಶ್ರೀ ಮಹಾಲಕ್ಷ್ಮೀ ಕೋ-ಆಪ್ ಕ್ರೆಡಿಟ್ ಸೊಸೈಟಿ ಲಿ., ಹಂದಿಗುಂದ

ಆರ್ಥಿಕವಾಗಿ ಹಿಂದುಳಿದವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸಹಕಾರ ಸಂಘಗಳ ಪಾತ್ರ ಮುಖ್ಯವಾದುದು. ಸಹಕಾರ ಸಂಘಗಳು ಸರ್ಕಾರದಿಂದ ಯಾವುದೇ ಹಣಕಾಸಿನ ನೆರವನ್ನು ಪಡೆಯದೇ ಗ್ರಾಹಕರ ಆರ್ಥಿಕ ಸಬಲತೆಗೆ ನಿರಂತರವಾಗಿ ಸೇವೆಯಲ್ಲಿ ತೊಡಗಿಕೊಂಡಿವೆ. ಸಹಕಾರ ಸಂಘಗಳು ತಾನು ಬೆಳೆಯುವುದರ ಜೊತೆಗೆ ತನ್ನ ಸದಸ್ಯರನ್ನೂ ಸಹ ಬೆಳೆಸುವ ಧರ್ಮವನ್ನು ಪಾಲಿಸುತ್ತಿವೆ. ಇಂತಹ ಸಹಕಾರ ಸಂಘಗಳ ಸಾಲಿನಲ್ಲಿ ಹಂದಿಗುಂದ ಗ್ರಾಮದ ಶ್ರೀ ಮಹಾಲಕ್ಷ್ಮೀ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಕೂಡ ಒಂದಾಗಿದೆ.

**ಸ್ಥಾಪನೆ :** ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕೊನೆಯ ಹಳ್ಳಿಯಾದ ಹಂದಿಗುಂದದಲ್ಲಿ ದಿನಾಂಕ : 5-11-1996 ರಂದು ಶ್ರೀ ಮಹಾಲಕ್ಷ್ಮೀ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಹಂದಿಗುಂದ ಎಂಬ ಹೆಸರಿನ ಸಹಕಾರ ಸಂಘವು ರಾಮನಗೌಡ ಬ. ಪಾಟೀಲರ ಮುಂದಾಳತ್ವದಲ್ಲಿ ವಿಜಯಪುರ ಜಿಲ್ಲೆಯ ಪರಮಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ಇವರ ಅಮೃತ ಹಸ್ತದಿಂದ ಪ್ರಾರಂಭಗೊಂಡಿತು.

ಸಂಘ ಪ್ರಾರಂಭವಾಗಿ 29 ವರ್ಷಗಳು ಪೂರೈಸಿವೆ. ಅಂದಿನಿಂದ ಇಲ್ಲಿಯವರೆಗೆ ಹಂದಿಗುಂದ ಹಾಗೂ ಸುತ್ತಲಿನ ಗ್ರಾಮಗಳ ಜನತೆಯ ಸೇವೆಯಲ್ಲಿ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಸಂಘವು ಸಾಗಿಬಂದ ದಾರಿಯನ್ನು ಈ ಚಿತ್ರಣದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಪ್ರಥಮ ಹೆಜ್ಜೆಗಳು :** ಸಂಘವು ಸುಮಾರು 414 ಜನ ಸದಸ್ಯರು ಮತ್ತು ರೂ. 414000 ರೂಪಾಯಿ ಶೇರು ಬಂಡವಾಳದೊಂದಿಗೆ ಪ್ರಥಮ ಹೆಜ್ಜೆ ಹಾಕಿತು. ಪ್ರಸ್ತುತ ಸಂಘವು ವಿಶಾಲವಾದ ಹಾಗೂ ಸುಸಜ್ಜಿತವಾದ ಭವ್ಯ ಹಾಗೂ ಜನಾಕರ್ಷಣೆಯ ನೂತನ ಕಟ್ಟಡ



ಹೊಂದಿದೆ. ಕಾಲ ಕಾಲಕ್ಕೆ ಆಡಳಿತ ಮಂಡಳಿಯವರು ಸಭೆಗಳನ್ನು ಕರೆದು ಸರ್ವಸದಸ್ಯರ ಸಲಹೆ, ಸೂಚನೆಗಳನ್ನು ವಿಚಾರಿಸಿ ಸಂಘದ ವ್ಯವಹಾರವನ್ನು ವರ್ಷದಿಂದ ವರ್ಷಕ್ಕೆ ವೃದ್ಧಿ ಮಾಡಿದ್ದಾರೆ. ಪ್ರಸ್ತುತ 2025 ಮಾರ್ಚ್ ಅಂತ್ಯಕ್ಕೆ ಸಂಘವು 2461 ಸದಸ್ಯರನ್ನು ಹೊಂದಿದ್ದು, ರೂ. 1,23,47,650=00 ಶೇರುಬಂಡವಾಳ, ರೂ. 31,73,32,520.63 ದುಡಿಯುವ ಬಂಡವಾಳ ಹೊಂದಿದೆ.

ರೂ. 16,97,51,679=00 ವಿವಿಧ ರೀತಿಯ ಸಾಲಗಳನ್ನು ಹಂಚಲಾಗಿದ್ದು ಈ ಸಾಲಿನಲ್ಲಿ ವಸೂಲಾತಿ ಉತ್ತಮವಾದ್ದರಿಂದ ಸಂಘ ರೂ. 81,40,339=00 ರೂ. ನಿವ್ವಳ ಲಾಭವನ್ನು ಗಳಿಸಿದೆ. ತನ್ನ ಸದಸ್ಯರಿಗೆ ಶೇ. 15 ಡಿವಿಡೆಂಟ್ ಹಂಚಿಕೆ ಮಾಡಿದ್ದು ಆಡಿಟ್ ವರ್ಗೀಕರಣದಲ್ಲಿ 'ಅ' ಶ್ರೇಣಿ ಪಡೆದುಕೊಂಡಿದೆ.

**ಸಂಸ್ಥೆಯ ಸೌಲಭ್ಯಗಳು :** ಪ್ರಸ್ತುತ ಸಂಘದಿಂದ ಜಾಮೀನು ಸಾಲ, ಭದ್ರತೆ ಸಾಲ, ಬಂಗಾರ ಸಾಲ, ವಾಹನ ಸಾಲ, ವ್ಯಾಪಾರ ಸಾಲ, ಕೃಷಿ ಸಾಲ, ಹೈನುಗಾರಿಕೆಗೆ ಸಾಲ, ಕುರಿ – ಕೋಳಿ ಸಾಕಾಣಿಕೆಗೆ ಸಾಲವನ್ನು ನೀಡಲಾಗುತ್ತಿದೆ. ನವೀನ ಮಾದರಿಯ ಕ್ಯಾಶ್ ಕೌಂಟರ್, ಸಂಪೂರ್ಣ ಗಣಕೀಕೃತ ಹಾಗೂ ಸೇಫ್ ಲಾಕರ್ ಹೊಂದಿದೆ. ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ನಾಗರಿಕರಿಗಾಗಿ ಸ್ಥಾಪಿಸಿದೆ.

ಸಂಘವು ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದ್ದು ಆನ್‌ಲೈನ್ ಬ್ಯಾಂಕಿಂಗ್, ಆರ್‌ಟಿಜಿಎಸ್. ನೆಫ್ಟ್, ಯುಪಿಐ ಸೇವೆಗಳನ್ನು ಹೊಂದಿದೆ. ಸಂಘವು ಸಾಲ ಸೌಲಭ್ಯಗಳ ಜೊತೆಗೆ ಗ್ರಾಹಕರ ಹಿತದೃಷ್ಟಿಯಿಂದ ಸಾಲಗಾರ ಸದಸ್ಯರು ಅಪಘಾತ ಅಥವಾ ಸ್ವಾಭಾವಿಕ ಮರಣ ಹೊಂದಿದರೆ ಭಾರತೀಯ ಜೀವ ವಿಮಾ ನಿಗಮದಿಂದ ಗುಂಪು ವಿಮೆ ಯೋಜನೆಯಡಿ ಗರಿಷ್ಠ ರೂ. 50,000 ವರೆಗೆ ಸಾಲದ ಮೊತ್ತಕ್ಕೆ ಪರಿಹಾರ ಸಿಗುತ್ತದೆ. ಹಾಗೂ ಸದಸ್ಯರಿಗೆ ಕರ್ನಾಟಕ ಸರ್ಕಾರ ಸಹಕಾರ ಇಲಾಖೆ ಮುಖಾಂತರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಾದ ಯಶಸ್ವಿನಿಯ ಸೌಲಭ್ಯವನ್ನು ಕೂಡ ಸದಸ್ಯರಿಗೆ ಒದಗಿಸಲಾಗಿದೆ.

ಸಂಸ್ಥೆಯು ಸಾರ್ವಜನಿಕ ಸೇವೆಯಲ್ಲಿ ಎರಡು ಸಲ ಸಾಯಿಟ ಪಸ್ಟ್ ಪ್ರೋಗ್ರಾಮ ಲಯನ್ಸ್ ಕ್ಲಬ್ ಆಫ್ ಮೀರಜ್ ಇವರ ಸಹಯೋಗದೊಂದಿಗೆ ನೇತ್ರ ಶಸ್ತ್ರಕ್ರಿಯಾ ಶಿಬಿರವನ್ನು ಹಮ್ಮಿಕೊಂಡು ಸಾಕಷ್ಟು ಜನರಿಗೆ ಸೇವೆಯನ್ನು ಒದಗಿಸಿದೆ.

| ಸಂಘದ ಪ್ರಗತಿ ಪಕ್ಷಿ ನೋಟ 31/03/2025 ಅಂತ್ಯಕ್ಕೆ | |
|---|---|
| ಸದಸ್ಯರು | 2461 |
| ಶೇರು ಬಂಡವಾಳ | 12347650=00 |
| ನಿದಿಗಳು | 37460228=01 |
| ದುಡಿಯುವ ಬಂಡವಾಳ | 317332520=60 |
| ಠೇವುಗಳು | 250779539=00 |
| ಸಾಲ ಕೊಟ್ಟದ್ದು | 169751679=00 |
| ನಿವ್ವಳ ಲಾಭ | 8140339=43 |
| ಆಡಿಟ್ ವರ್ಗ | 'ಅ' |

ಒಂದು ಸಹಕಾರ ಸಂಘವು ಅಭಿವೃದ್ಧಿಯನ್ನು ಕಾಣಬೇಕಾದರೆ ನೌಕರರ ಹೊಸ ಆಲೋಚನೆಗಳು ಮತ್ತು ಆಡಳಿತ ಮಂಡಳಿಯು ನೌಕರರಿಗೆ ನೀಡುತ್ತಿರುವ ಪ್ರೋತ್ಸಾಹ ಹಾಗೂ ಗ್ರಾಹಕರ ಜೊತೆಗೆ


ಶಿವಲಿಂಗಪ್ಪ ದುಂ. ವಾಲಿ
ಅಧ್ಯಕ್ಷರು


ಧರೆಪ್ಪ ಮ. ಚಿನಗುಂಡಿ
ಉಪಾಧ್ಯಕ್ಷರು


ಶಿವಾನಂದ ಬ. ಖಾನಗೌಡ
ಕಾರ್ಯದರ್ಶಿ

ಉತ್ತಮ ಸಂಬಂಧವೇ ಸಂಘದ ಪ್ರಗತಿಗೆ ಕಾರಣವಾಗುತ್ತದೆ.

ಇದಕ್ಕೆ ಪೂರಕವಾಗಿ ಸಂಘ ಉತ್ಸಾಹಿ ಅಧ್ಯಕ್ಷರಾದ ಶಿವಲಿಂಗಪ್ಪ ದುಂ. ವಾಲಿ, ಉಪಾಧ್ಯಕ್ಷರಾದ ಧರೆಪ್ಪ ಮ. ಚಿನಗುಂಡಿ ನೇತೃತ್ವದ ಆಡಳಿತ ಮಂಡಳಿ ಹಾಗೂ ಸಂಸ್ಥಾಪಕ ಕಾರ್ಯದರ್ಶಿ ಶಿವಾನಂದ ಬ. ಖಾನಗೌಡ ಹಾಗೂ ಉತ್ಸಾಹಿ ಸಿಬ್ಬಂದಿಗಳ ಕಾರ್ಯವೈಖರಿ ಹಾಗೂ ಹೊಂದಾಣಿಕೆಯ ಮನೋಭಾವ ಸಂಸ್ಥೆಯನ್ನು ಜಿಲ್ಲೆಯ ಜನ-ಮನದಲ್ಲಿ ಉಳಿಯುವಂತೆ ಮಾಡಿದೆ. ನಿಸ್ವಾರ್ಥ ಸೇವೆಯಿಂದ ಸಂಘ ಇವತ್ತಿನ ದಿನಗಳಲ್ಲಿ ಉತ್ತುಂಗದ ಶಿಖರವನ್ನು ತಲುಪಿದೆ. ಮುಂದಿನ ದಿನಗಳಲ್ಲಿ ಸಂಘವು ಇನ್ನಷ್ಟು ಎತ್ತರಕ್ಕೆ ಬೆಳೆದು ಆರ್ಥಿಕವಾಗಿ ಹಿಂದುಳಿದವರಿಗೆ, ರೈತರಿಗೆ, ಮಹಿಳೆಯರಿಗೆ ಮತ್ತು ಗ್ರಾಮೀಣರಿಗೆ ಆಶಾಕಿರಣವಾಗಲಿ ಎಂಬುದೇ ನಮ್ಮೆಲ್ಲರ ಆಶಯವಾಗಿದೆ.



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಎಸ್.ಚಂದ್ರಶೇಖರ್ ರವರ ನೇತೃತ್ವದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಹಕಾರ ಸಂಘ, ಮೈಸೂರು (ಜನತಾ ಬಜಾರ್) ಚುನಾವಣೆಯಲ್ಲಿ 17 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿ ಅದರಲ್ಲಿ ಅಧ್ಯಕ್ಷರಾಗಿ ಶ್ರೀ ಯು.ಎಸ್.ರಮೇಶ್ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಹೆಚ್.ಸಿ.ಪಂಕಜರವರು ಚುನಾಯಿತರಾಗಿರುತ್ತಾರೆ.

# ಈ ವರ್ಷ ಹನ್ನೊಂದು ದಿನಗಳ ದಸರಾ ಹಬ್ಬ : ನಾಡಹಬ್ಬ ದಸರಾ ನೋಡಲು ಬನ್ನಿ...



ನಾಡಹಬ್ಬ ದಸರಾ ಕರ್ನಾಟಕ ಅತಿದೊಡ್ಡ ಹಬ್ಬ ಎಂಬ ಖ್ಯಾತಿಗಳಿಸಿದೆ. ಹತ್ತು ದಿನಗಳ ಕಾಲ ಜಗದ್ವಿಖ್ಯಾತ ಮೈಸೂರು ದಸರಾ ಆಚರಿಸಲಾಗುತ್ತದೆ. ಪಂಚಾಂಗದ ಪ್ರಕಾರ ಈ ಬಾರಿ ಹನ್ನೊಂದು ದಿನಗಳ ಕಾಲ ದಸರಾ ಹಬ್ಬ ಆಚರಿಸಲಾಗುತ್ತದೆ. ಮೈಸೂರು ದಸರಾದ ವೈಭವವನ್ನು ಕಣ್ತುಂಬಿಕೊಳ್ಳಲು ಜಗತ್ತಿನ ಮೂಲೆ ಮೂಲೆಗಳಿಂದ ಲಕ್ಷಾಂತರ ಮಂದಿ ಮೈಸೂರಿಗೆ ಆಗಮಿಸುತ್ತಾರೆ. ದಸರಾ ಆಚರಣೆಯ ಸಮಯದಲ್ಲಿ ಕರ್ನಾಟಕದ ಕಲೆ, ಸಂಗೀತ, ಸಂಸ್ಕೃತಿ, ಆಚಾರ, ವಿಚಾರ, ಆಹಾರ, ಜಾನಪದ, ಕ್ರೀಡೆ, ಕರಕುಶಲ ವಸ್ತುಗಳ ಪ್ರದರ್ಶನ, ಫ್ಲವರ್ ಶೋ, ವೈಮಾನಿಕ ಪ್ರದರ್ಶನ, ದಸರಾ ಕೊನೆಯ ದಿನ ನಡೆಯುವ ಜಗತ್ಪ್ರಸಿದ್ಧ ಜಂಬೂ ಸವಾರಿ, ಪಂಜಿನ ಕವಾಯತು ನೋಡುವುದೆ ಕಣ್ಣಿಗೆ ಹಬ್ಬ. ಜಗಮಗ ಬೆಳಕಿನಲ್ಲಿ ಮೈಸೂರು ನಗರ ಭೂಲೋಕದ ಸ್ವರ್ಗದಂತೆ ಕಂಗೊಳಿಸುತ್ತದೆ. ಇದನ್ನು ನೋಡಲು ಎರಡು ಕಣ್ಣು ಸಾಲುದು.


ದಸರಾ ಹಬ್ಬ ಆಚರಣೆ ಸಮಯದಲ್ಲಿ ನಾಡದೇವತೆ ಚಾಮುಂಡೇಶ್ವರಿಯ ಪ್ರತಿದಿನ ವಿವಿಧ ಅಲಂಕಾರದಲ್ಲಿ ಶೃಂಗರಿಸಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ತಾಯಿ ಚಾಮುಂಡೇಶ್ವರಿಯ ದರ್ಶನಕ್ಕೆ ನಾಡಿನ ಮೂಲೆ ಮೂಲೆಗಳಿಂದ ಪ್ರವಾಹದೋಪಾದಿಯಲ್ಲಿ ಆಗಮಿಸುವ ಭಕ್ತರಿಂದ ತಾಯಿಯ ದರ್ಶನಕ್ಕೆ ನೂಕುನುಗ್ಗುಲು ಉಂಟಾಗುವುದು ಪ್ರತಿವರ್ಷದ ಸಾಮಾನ್ಯವಾಗಿದೆ. ಈ ವರ್ಷ ಹನ್ನೊಂದು ದಿನಗಳ ಕಾಲ ದಸರಾ ಆಚರಣೆ ಕಾರಣ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳ ಸಾಮಾನ್ಯವಾಗಿದೆ.

ಮೈಸೂರು ಅರಮನೆಯ ದಸರಾ ಆಚರಣೆಯು ರಾಜಪರಂಪರೆಯ ಪರಂಪರೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಕರ್ನಾಟಕ ಸರ್ಕಾರ ಇದನ್ನು ನಾಡಹಬ್ಬವಾಗಿ ಆಚರಿಸುತ್ತದೆ. ಹನ್ನೊಂದು ದಿನಗಳ ಆಚರಣೆಯು ಪ್ರವಾಸಿಗರಿಗೆ ಹೆಚ್ಚಿನ ರಸದೌತಣವನ್ನು ಒದಗಿಸುತ್ತದೆ ಮತ್ತು ಹೆಚ್ಚಿನ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶವನ್ನು ನೀಡುತ್ತದೆ. ಯಾವುದೇ ಅಪಶಕುನಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ಡಾ.ಶೆಲ್ವ ಪಿಳ್ಳೈ ಅಯ್ಯಂಗಾರ್ ಸ್ಪಷ್ಟಪಡಿಸಿದ್ದಾರೆ. ಪಂಚಾಂಗದ ಪ್ರಕಾರ ಈ ಆಚರಣೆಯು ಸರಿಯಾಗಿದೆ ಮತ್ತು ಎಲ್ಲರಿಗೂ ಒಳಿತನ್ನು ತರುತ್ತದೆ ಎಂಬ ನಂಬಿಕೆ ವ್ಯಕ್ತಪಡಿಸಿದ್ದಾರೆ.

### ರಾಜಮಾತೆ ಪ್ರಮೋದಾದೇವಿ ಸ್ಪಷ್ಟನೆ

ಈ ವರ್ಷ ಮೈಸೂರು ದಸರಾ 11 ದಿನಗಳ ಕಾಲ ಆಚರಣೆ ಮಾಡುತ್ತಿರುವುದರ ಬಗ್ಗೆ ರಾಜಮಾತೆ ಪ್ರಮೋದಾದೇವಿ ಸ್ಪಷ್ಟನೆ ನೀಡಿದ್ದಾರೆ. 11 ದಿನಗಳ ಕಾಲ ಆಚರಣೆ ಮಾಡುತ್ತಿರುವುದು ಹೊಸತೇನಲ್ಲ. ಈ ಹಿಂದೆಯು ಹಲವು ಬಾರಿ 11 ದಿನಗಳ ಕಾಲ ಸಾಂಪ್ರದಾಯಿಕವಾಗಿ ಆಚರಣೆ ಮಾಡಲಾಗಿದೆ. ಅದೇ ರೀತಿ ಈ ಬಾರಿಯೂ ಸಹ 11 ದಿನಗಳ ಕಾಲ ನಡೆಯಲಿದೆ. ಇದರಲ್ಲಿ ಯಾವುದೇ ವಿಶೇಷತೆ ಇಲ್ಲ. ನಾಡಹಬ್ಬ ಹಾಗೂ ಅರಮನೆಯ ನವರಾತ್ರಿಗಳು ಸಾಂಪ್ರದಾಯಿಕವಾಗಿ ಈ ಹಿಂದಿನಂತೆಯೇ ನಡೆಯಲಿವೆ ಎಂದು ಪತ್ರದ ಮೂಲಕ ಅವರು ಸ್ಪಷ್ಟನೆ ನೀಡಿದ್ದಾರೆ. ಈ ಹಿಂದೆ 1920, 1929, 1952, 1962, 1980, 1990, 1998, 2000, 2015 ಹಾಗೂ





2016ರಲ್ಲಿ ದಸರಾವನ್ನು 11 ದಿನಗಳ ಕಾಲ ಆಚರಣೆ ಮಾಡಲಾಗಿದೆ ಎಂದು ರಾಜಮಾತೆ ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

**ಬಾನು ಮಸ್ತಾಕ್ ಉದ್ಘಾಟನೆ**

ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರಿಂದ ಚಾಲನೆ. ಬಾನು ಮಸ್ತಾಕ್ ಅವರನ್ನು ಮೈಸೂರು ಜಿಲ್ಲಾಡಳಿತದ ವತಿಯಿಂದ ಗೌರವಿಸಲಾಗಿದೆ. ಮುಸ್ಲಿಂ ಮಹಿಳೆಯೊಬ್ಬರು ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟಿಸುವ ಮೂಲಕ ಕನ್ನಡನಾಡಿನಲ್ಲಿ ಸೌಹಾರ್ಧತೆಯ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಬಾನು ಮುಷ್ತಾಕ್ ಅವರ ಕೃತಿ 'ಎದೆಯ ಹಣತೆ'ಗೆ ಬುಕರ್ ಪ್ರಶಸ್ತಿ ದೊರೆತಿದ್ದು, ಕರ್ನಾಟಕದ ಲೇಖಕಿಗೆ ಈ ಪ್ರಶಸ್ತಿ ದೊರೆತಿರುವುದು ಸಂತಸ ತಂದಿದೆ. ರೈತ ಸಂಘ, ಕನ್ನಡ ಚಳವಳಿಯ ಜೊತೆಗೆ ಹೋರಾಟದ ಹಿನ್ನೆಲೆಯುಳ್ಳ ಬಾನು ಮುಷ್ತಾಕ್, ಪ್ರಗತಿಪರ ಚಿಂತಕರೂ ಆಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಸ ವ್ಯಕ್ತಪಡಿಸಿದ್ದಾರೆ.

ಈ ಬಾರಿ ಶಾಸ್ತ್ರದ ಪ್ರಕಾರ ಹನ್ನೊಂದು ದಿನ ದಸರಾ ಆಚರಣೆ. ಅಕ್ಟೋಬರ್ 2 ರಂದು ವಿಜಯದಶಮಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಲೇಖಕಿ ಬಾನು ಮಸ್ತಾಕ್ ಮೈಸೂರು ದಸರಾ ಉದ್ಘಾಟನೆಯ ಗೌರವಕ್ಕೆ ಪಾತ್ರರಾದ ಐದನೇ ಮಹಿಳೆಯಾಗಿದ್ದಾರೆ. 2022ರಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ ನೀಡಿದ್ದರು. ದೇಶದ ಪ್ರಥಮ ಪ್ರಜೆಯಾದ ಅವರು ಬುಡಕಟ್ಟು ಮಹಿಳೆಯೂ ಆಗಿದ್ದ ಕಾರಣಕ್ಕೆ ಅವರ ಆಯ್ಕೆ ಗಮನ ಸೆಳೆದಿತ್ತು. 2018ರಲ್ಲಿ ಸಾಹಿತಿ ಸುಧಾ ಮೂರ್ತಿಗೆ ಈ ಅವಕಾಶ ದೊರೆತಿತ್ತು. ಈ ಹಿಂದೆ 1999ರಲ್ಲಿ ಗಂಗೂಬಾಯಿ ಹಾನಗಲ್ ಹಾಗೂ 2001ರಲ್ಲಿ ನಟಿ ಬಿ.ಸರೋಜಾದೇವಿ ಅವರಿಗೂ ಉದ್ಘಾಟನೆಯ ಅವಕಾಶ ಸಿಕ್ಕಿದೆ.

**ಸಾಹಿತಿಗಳಿಗೆ ಮಣೆ :** ಮಹಾರಾಷ್ಟ್ರದ ಲಾತೂರ್‌ನಲ್ಲಿ ಭೂಕಂಪನವಾದಾಗ 'ದಸರಾ ಆಚರಿಸುವುದು ಬೇಡ' ಎಂಬ ಕೂಗು ಕೇಳಿ ಬಂದಿತ್ತು. ಅಂದಿನ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ವರನಟ ರಾಜಕುಮಾರ್ ಅವರನ್ನೇ ಉದ್ಘಾಟಕರಾಗಿ ಆಹ್ವಾನಿಸಿ ವಿರೋಧವನ್ನು ತಣ್ಣಗಾಗಿಸಿದ್ದರು. ಅಂದಿನಿಂದ ದಸರಾ ಉದ್ಘಾಟನೆಗೆ ಅತಿಥಿಗಳನ್ನು ಆಹ್ವಾನಿಸುವ ಪರಿಪಾಠ ಬೆಳೆದಿದೆ.

ದಸರಾ ಉದ್ಘಾಟಕರಲ್ಲಿ ಸಾಹಿತಿಗಳದ್ದೇ ಸಿಂಹಪಾಲು. ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾರ್ನಾಡ್, ಚನ್ನವೀರ ಕಣವಿ, ಕೆ.ಎಸ್. ನಿಸಾರ್ ಅಹಮ್ಮದ್, ಎಸ್.ಎಲ್. ಭೈರಪ್ಪ ಹಾಗೂ ಕಳೆದ ವರ್ಷ ಹಂ.ಪ. ನಾಗರಾಜಯ್ಯ ಉದ್ಘಾಟಕರಾಗಿ ಪಾಲ್ಗೊಂಡಿದ್ದರು.

ಹೋರಾಟಗಾರರು, ಗಾಂಧಿವಾದಿ, ರಾಜಕಾರಣಿಗಳು, ಪ್ರಗತಿಪರರು, ರೈತರು, ಮಠಾಧೀಶರೂ ಉತ್ಸವವನ್ನು ಉದ್ಘಾಟಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರ ಎಂ.ಎನ್. ಜೋಯಿಸ್, ವಿಜ್ಞಾನಿ ಡಾ. ಸಿ.ಎನ್. ಆರ್. ರಾವ್, ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ, ಗಾಂಧಿವಾದಿ ಜಿ. ನಾರಾಯಣ, ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮೀಜಿ, ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿ, ಪೇಜಾವರದ ವಿಶ್ವೇಶತೀರ್ಥ ಸ್ವಾಮೀಜಿ, ಸಿದ್ದೇಶ್ವರ ಸ್ವಾಮೀಜಿ, ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ, ಶ್ರೀಶ್ರೀ ರವಿಶಂಕರ ಗುರೂಜಿ ಈ ಪಟ್ಟಿಯಲ್ಲಿದ್ದಾರೆ. ಅಂಬರೀಷ್, ಹಂಸಲೇಖರಂತಹ ಸಿನಿಮಾ ಕ್ಷೇತ್ರದ ಮಂದಿಗೂ ಅವಕಾಶ ಸಿಕ್ಕಿದೆ.

2015ರಲ್ಲಿ ರೈತ, ಎಚ್.ಡಿ.ಕೋಟೆ ತಾಲ್ಲೂಕು ಮಲಾರ ಕಾಲೊನಿಯ ಪುಟ್ಟಯ್ಯ ಉದ್ಘಾಟಿಸಿದ್ದರು. ರೈತರ ಸರಣಿ ಆತ್ಮಹತ್ಯೆ ಹಿನ್ನೆಲೆಯಲ್ಲಿ ಕೃಷಿಕರಿಗೆ ಆತ್ಮಸ್ಥೈರ್ಯ ತುಂಬುವ ಸಲುವಾಗಿ ಸರ್ಕಾರ ಈ ನಿರ್ಣಯ ಕೈಗೊಂಡಿತ್ತು. 2021ರಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, 2020ರಲ್ಲಿ ಕೊರೊನಾ ಮುಂಚೂಣಿ ಯೋಧರಿಗೆ ಗೌರವ ಸಲ್ಲಿಸಲು ಜಯದೇವ ಹೃದ್ರೋಗ ಸಂಸ್ಥೆಯ ಅಂದಿನ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಅವರಿಗೆ ಉದ್ಘಾಟನೆಯ ಗೌರವ ನೀಡಿದ್ದರು.

ಮೈಸೂರು ಅರಸರಿಂದ ದಸರಾ ಆಚರಣೆ ನಿಂತ ಬಳಿಕ ಸರ್ಕಾರವೇ 'ನಾಡಹಬ್ಬ'ದ ಹೆಸರಿನಲ್ಲಿ ದಸರಾ ಮಹೋತ್ಸವ ಆಚರಿಸುತ್ತ ಬಂದಿದೆ. ನವರಾತ್ರಿಯ ಮೊದಲ ದಿನ ಉದ್ಘಾಟನೆ ಮೂಲಕ ದಸರಾಕ್ಕೆ ಚಾಲನೆ ನೀಡಲಾಗುತ್ತದೆ. ದಸರೆಯ ಕೊನೆಯ ದಿನವಾದ ವಿಜಯದಶಮಿಯಂದು ನಡೆಯುವ 'ಜಂಬೂ ಸವಾರಿ'ಯನ್ನು ಮುಖ್ಯಮಂತ್ರಿ ಹಾಗೂ 'ಪಂಜಿನ ಕವಾಯತು' ಅನ್ನು ರಾಜ್ಯಪಾಲರು ಉದ್ಘಾಟಿಸುವುದು ವಾಡಿಕೆ.

**– ಸವಿತಾ ನಾಯ್ಕ್, ಬೆಂಗಳೂರು.**



# ಸಣ್ಣ ಮತ್ತು ಬೀದಿ ವ್ಯಾಪಾರಿಗಳಿಗೆ ತೆರಿಗೆ ಕಾನೂನುಗಳ ಅರಿವಿನ ತುರ್ತು ಅಗತ್ಯ

▸▸ ಚಿಲಕರಾಯ ಎರ್ರಿಸ್ವಾಮಿ, ಚಾರ್ಟರ್ಡ್ ಅಕೌಂಟೆಂಟ್, ಬಳ್ಳಾರಿ

ಕರ್ನಾಟಕ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ಬೆಂಗಳೂರು ಮತ್ತು ಇತರೆ ಜಿಲ್ಲೆಗಳಲ್ಲಿ ಜಿಎಸ್‌ಟಿ ವಸೂಲಾತಿಗೆ ನೋಟೀಸುಗಳನ್ನು ನೀಡಿರುವುದರ ಕುರಿತು ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ 'ದೊಡ್ಡದಾದ' ಸುದ್ದಿಯಾಗುತ್ತಿದೆ.

ಪ್ರಸ್ತುತ ಸನ್ನಿವೇಶದಲ್ಲಿ ವರ್ತಕರ ಕರ್ತವ್ಯಗಳೇನು? ಮಾಧ್ಯಮಗಳು ಬಿತ್ತರಿಸುತ್ತಿರುವ `Special Story'ಗಳು ಜನಸಾಮಾನ್ಯರಿಗೆ ನೀಡುತ್ತಿರುವ ಸಂದೇಶವೇನು? ಈ ಸಮಸ್ಯೆಗೆ ಪರಿಹಾರ ಮತ್ತು ಇತರೆ ಸಾಧಕ ಬಾದಕಗಳ ಕುರಿತಾದ ಒಂದು ವಿಶ್ಲೇಷಣೆ ಇದಾಗಿದೆ.

ಯಾವುದೇ ಸರ್ಕಾರ ಜನರಿಗೋಸ್ಕರ ಖರ್ಚು ಮಾಡುವ ಹಣ ಜನರಿಂದಲೇ ವಿವಿಧ ರೀತಿಯ ತೆರಿಗೆ ಮತ್ತು ಶುಲ್ಕ ರೂಪದಲ್ಲಿ ವಸೂಲಿ ಮಾಡುತ್ತದೆ. ಈ ರೀತಿಯ ತೆರಿಗೆ ಸಂಗ್ರಹದಲ್ಲಿ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಪಾತ್ರ ಸಿಂಹಪಾಲು. 'ಜಿಎಸ್‌ಟಿ' ಸಂಗ್ರಹಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ, ಎರಡಕ್ಕೂ ಪ್ರತ್ಯೇಕ ಇಲಾಖೆಗಳಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಂಗ್ರಹವಾದ ತೆರಿಗೆಯಲ್ಲಿ ಸಮಪಾಲು.

ರಾಜ್ಯ ಸರ್ಕಾರವು ಜಿಎಸ್‌ಟಿ ವಸೂಲಾತಿಯನ್ನು ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಮೂಲಕ ವಸೂಲಿ/ಸಂಗ್ರಹ ಮಾಡುತ್ತದೆ. ಈ ಇಲಾಖೆಯು ವಿವಿಧ ಬ್ಯಾಂಕುಗಳಿಂದ ಮಾಹಿತಿ ಪಡೆದು ವ್ಯಾಪಾರಿಗಳ ವ್ಯವಹಾರಗಳನ್ನು ಪರಿಶೀಲಿಸಿ, ಬೆಂಗಳೂರು ಮತ್ತು ರಾಜ್ಯದ ಇತರೆ ಜಿಲ್ಲೆಗಳಲ್ಲಿ ಜಿಎಸ್‌ಟಿ ವಸೂಲಿಗೆ/ಸಂಗ್ರಹಕ್ಕೆ ನೋಟಿಸು ಜಾರಿ ಮಾಡಿದೆ. ಇಲಾಖೆಯಿಂದ ನೋಟಿಸು ಪಡೆದವರಲ್ಲಿ ಚಿಕ್ಕ ಪುಟ್ಟ ವ್ಯಾಪಾರಿಗಳು ಹಾಗೂ ಬೀದಿ ಬದಿ ವ್ಯಾಪಾರಿಗಳೂ ಇರುವುದು 'ಗಮನಾರ್ಹ ಸುದ್ದಿ'ಗೆ ಕಾರಣವಾಗಿದೆ.

**ಜಿಎಸ್‌ಟಿ ಕಾನೂನು ಏನನ್ನು ಹೇಳುತ್ತದೆ? :** ಯಾವುದೇ ವ್ಯವಹಾರ ಮಾಡುವ ಒಬ್ಬ ವ್ಯಕ್ತಿ – ಸಂಸ್ಥೆ ಒಂದು ವರ್ಷದಲ್ಲಿ ವ್ಯಾಪಾರ ವಹಿವಾಟಿನ ನಿರ್ದಿಷ್ಟ ಮಿತಿಯನ್ನು ಮೀರಿದಲ್ಲಿ, ವಿನಾಯಿತಿರಹಿತ ಸರಕು ಮತ್ತು ಸೇವೆಗಳಲ್ಲಿ ವ್ಯವಹಾರ ನಡೆಸುತ್ತಿದ್ದಲ್ಲಿ ಜಿಎಸ್‌ಟಿ ಕಾನೂನಿನ ಅಡಿಯಲ್ಲಿ ನೋಂದಾಯಿಸಿಕೊಂಡು ಗ್ರಾಹಕರಿಂದ ಜಿಎಸ್‌ಟಿ ವಸೂಲಿ ಮಾಡಿ, ಸರ್ಕಾರದ ಖಜಾನೆಗೆ ಪಾವತಿಸಬೇಕು. ಇದು ವ್ಯಾಪಾರಿಯ ಆದ್ಯ ಕರ್ತವ್ಯವೂ ಹೌದು. ಇದು, ವ್ಯಾಪಾರಿಯು ವ್ಯಾಪಾರದಲ್ಲಿ ಗಳಿಕೆ ಮಾಡಿರುವ ಲಾಭದಿಂದ ಪಾವತಿಸುವ ತೆರಿಗೆ ಅಲ್ಲ.

ಜಿಎಸ್‌ಟಿ ಅಡಿಯಲ್ಲಿ ನೋಂದಣಿಯ ವಾರ್ಷಿಕ ಮಿತಿಯು ಸರಕು ವ್ಯವಹಾರಕ್ಕೆ ರೂ. 40 ಲಕ್ಷ ಮತ್ತು ಸೇವೆಗಳಿಗೆ ರೂ. 20 ಲಕ್ಷ. ಬ್ಯಾಂಕಿನಲ್ಲಿ ಜಮೆಯಾಗುವ ಮೊತ್ತ (ಯುಪಿಐ ಮೊತ್ತ ಸೇರಿ) ಮತ್ತು ನಗದು ರೂಪದಲ್ಲಿ ಪಡೆದ ಮೊತ್ತಗಳನ್ನು ಪರಿಗಣಿಸಿ ಒಟ್ಟು ವಹಿವಾಟಿಗೆ ಲೆಕ್ಕಚಾರ ಮಾಡತಕ್ಕದ್ದು. ವ್ಯಾಪಾರ – ವಹಿವಾಟಿನ ಮಿತಿ ದಾಟಿದಲ್ಲಿ ಜಿಎಸ್‌ಟಿ ನೋಂದಣಿ ಕಡ್ಡಾಯ.




**ಎಲ್ಲಾ ಸರಕು ಮತ್ತು ಸೇವೆಗಳಿಗೆ ಜಿಎಸ್‌ಟಿ ವಿಧಿಸಲಾಗುತ್ತದೆಯೆ?**

ಖಂಡಿತವಾಗಿಯೂ ಇಲ್ಲ. ಜಿಎಸ್‌ಟಿ ಕಾನೂನಿನ ಅಡಿ ಕೆಲವು ಸರಕು ಮತ್ತು ಸೇವೆಗಳಿಗೆ ವಿನಾಯಿತಿ ಇದ್ದು ಇನ್ನುಳಿದ ಸರಕು ಸೇವೆಗಳ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತದೆ. ವ್ಯಾಪಾರಿಯು ತೆರಿಗೆ ವಿನಾಯಿತಿ ಹೊಂದಿರುವ ಸರಕು ಮತ್ತು ಸೇವೆಗಳಲ್ಲಿ ವ್ಯವಹರಿಸುತ್ತಿದ್ದಲ್ಲಿ ಅವರು ಜಿಎಸ್‌ಟಿ ನೋಂದಣಿ ಹಾಗೂ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆಯುತ್ತಾನೆ. (ಉದಾ: ಹಣ್ಣು ಮತ್ತು ತರಕಾರಿಗಳು, ಬ್ರಾಂಡೆಡ್ ಅಲ್ಲದ, ಸಂಸ್ಕರಿಸದ ದವಸ ಧಾನ್ಯಗಳು, ಹಾಲು, ಮೊಟ್ಟೆ ಸೇರಿ ಹಲವಾರು ಸರಕುಗಳಿಗೆ ವಿನಾಯಿತಿ ಇದೆ). ತೆರಿಗೆ ವಿನಾಯಿತಿ ಇಲ್ಲದ ಸರಕುಗಳ ವ್ಯವಹಾರ ನಡೆಸುತ್ತಿದ್ದಲ್ಲಿ ರೂ. 40 ಲಕ್ಷ ರೂ. ಗಳಿಗಿಂತ ಕಡಿಮೆ ವಹಿವಾಟು ಇದ್ದಲ್ಲಿ ಜಿಎಸ್‌ಟಿ ನೋಂದಣಿ ಹಾಗೂ ಪಾವತಿ ಕಡ್ಡಾಯವಲ್ಲ.

ಜಿಎಸ್‌ಟಿ ವಿನಾಯಿತಿ ಹೊಂದಿದ ಮತ್ತು ಹೊಂದದ ಎರಡೂ ವ್ಯವಹಾರಗಳನ್ನು ಏಕಕಾಲದಲ್ಲಿ ನಡೆಸುತ್ತಿದ್ದಲ್ಲಿ ಮತ್ತು ಆ ವಾರ್ಷಿಕ ವಹಿವಾಟು ನಿಗದಿತ ಮಿತಿಗಿಂತ ಹೆಚ್ಚು ಇದ್ದ ಸಂದರ್ಭದಲ್ಲಿ ಜಿಎಸ್‌ಟಿ ನೋಂದಣಿ ಕಡ್ಡಾಯ.

**ಜಿಎಸ್‌ಟಿ ನೋಟೀಸು ಬರಲು ಕಾರಣವೇನು?**

ಜಿಎಸ್‌ಟಿ ಇಲಾಖೆಯು ವರ್ತಕರ ಬ್ಯಾಂಕ್ ಖಾತೆಯಲ್ಲಿ ಜಮೆಯಾದ ಒಟ್ಟು ಮೊತ್ತವು ನಿಗದಿತ ಮಿತಿಯನ್ನು ಮೀರಿ ಜಮೆಯಾದ ಒಟ್ಟು ಮೊತ್ತವನ್ನು 'ವಹಿವಾಟು' ಎಂದು ಪರಿಗಣಿಸಿ ತೆರಿಗೆ ಪಾವತಿಸಲು ನೋಟೀಸ್ ಜಾರಿ ಮಾಡುತ್ತದೆ. ಯಾವುದೇ ಖಾತೆದಾರರು ನೋಟೀಸ್ ಪಡೆದಾಕ್ಷಣ, ಆತಂಕ ಪಡುವ ಅಗತ್ಯವಿಲ್ಲ. ನೋಟೀಸ್ ಅಂತಿಮವಲ್ಲ. ಸೂಕ್ತ ದಾಖಲೆಗಳ ಜೊತೆಯಲ್ಲಿ ನೋಟೀಸ್‌ಗೆ ಉತ್ತರ ಸಿದ್ದಪಡಿಸಿ, ಇಲಾಖೆಗೆ ಸಲ್ಲಿಸಿದಲ್ಲಿ ಸಂಪೂರ್ಣ ಅಥವಾ ಭಾಗಶಃ ಪರಿಹಾರ ದೊರಕುವ ಸಾಧ್ಯತೆಗಳು ಹೆಚ್ಚಿವೆ.

#### ಜಿಎಸ್‌ಟಿ ನೋಟೀಸುಗಳಿಗೆ ಸಂಭವನಿಯ ಪರಿಹಾರಗಳು


- ನೋಟೀಸು ಪಡೆದವರು ತೆರಿಗೆ ವಿನಾಯಿತಿ ಹೊಂದಿದ ಸರಕು ಮತ್ತು ಸೇವೆಗಳಲ್ಲಿ ವ್ಯವಹರಿಸುತ್ತಿದ್ದಲ್ಲಿ – 'ತೆರಿಗೆ ವಿನಾಯಿತಿ ಹೊಂದಿದ ಸರಕು ಮತ್ತು ಸೇವೆಗಳಲ್ಲಿ ವ್ಯವಹರಿಸುತಿದ್ದೇವೆ' ಎಂದು ನೋಟಿಸಿಗೆ ಪ್ರತ್ಯುತ್ತರ ನೀಡಿದಲ್ಲಿ ಜಿಎಸ್‌ಟಿ ವಸೂಲಿ ಪ್ರಕ್ರಿಯನ್ನು ಇಲಾಖೆಯ ಅಧಿಕಾರಿಗಳು ಕೈ ಬಿಡುತ್ತಾರೆ.
- ನೋಟೀಸು ಪಡೆದವರು, ತಮ್ಮ ಬ್ಯಾಂಕ್ ಖಾತೆಯಲ್ಲಿ ಜಮೆಯಾದ ಮೊತ್ತದಲ್ಲಿ 'ವಹಿವಾಟಿನ ಮೊತ್ತ' ಮತ್ತು 'ವಹಿವಾಟೇತರ ಮೊತ್ತ' ವನ್ನು ಪ್ರತ್ಯೇಕವಾಗಿ ಗುರುತಿಸಿ ಸೂಕ್ತ ದಾಖಲೆಗಳನ್ನು ಒದಗಿಸಿದಲ್ಲಿ ಮತ್ತು ಬೇರ್ಪಟ್ಟ 'ವಹಿವಾಟಿನ ಮೊತ್ತ'ವು ಮೇಲೆ ತಿಳಿಸಿದ ಮಿತಿಗಿಗಿಂತಲೂ ಕಡಿಮೆ ಮೊತ್ತವಿದ್ದಲ್ಲಿ 'ಜಿಎಸ್‌ಟಿ ನೋಂದಣಿ ಮತ್ತು ತೆರಿಗೆ ಪಾವತಿ' ವ್ಯಾಪ್ತಿಯಿಂದ ವಿನಾಯಿತಿ ಹೊಂದಿರುವರು ಎಂದು ನೋಟೀಸಿಗೆ ಉತ್ತರ ನೀಡಿ, ಇಲಾಖೆಯಿಂದ ಪರಿಹಾರ ಪಡೆಯಬೇಕು.
- **ಕಾಂಪೋಸಿಷನ್ ಸ್ಕೀಂ :** ವ್ಯವಹಾರಿ/ವರ್ತಕರು ಸರಕು ಮಾರಾಟ ವ್ಯವಹಾರ ಮಾಡುತ್ತಿದ್ದಲ್ಲಿ, ವಾರ್ಷಿಕ ವಹಿವಾಟು ಒಂದೂವರೆ ಕೋಟಿ ರೂಪಾಯಿಗಳ ವರೆಗೆ ಇದ್ದಲ್ಲಿ ಅಂತಹ ವರ್ತಕರಿಗೆ ಸರಳ ರೂಪದ ತೆರಿಗೆ ಪದ್ಧತಿ ಜಾರಿಯಲ್ಲಿದ್ದು ಅದನ್ನು 'ಕಾಂಪೋಸಿಷನ್ ಸ್ಕೀಂ' ಎನ್ನಲಾಗುತ್ತದೆ. 'ಕಾಂಪೋಸಿಷನ್ ಸ್ಕೀಂ'ನ ಅಡಿಯಲ್ಲಿ ಒಟ್ಟು ವಹಿವಾಟಿನ ಶೇ. 1 ರಷ್ಟು ಜಿಎಸ್‌ಟಿ ಪಾವತಿಸಲು ಅವಕಾಶವಿರುತ್ತದೆ. 'ಕಾಂಪೋಸಿಷನ್ ಸ್ಕೀಂ' ಇನ್ನು ಮುಂದೆ ಮಾಡುವ ವ್ಯವಹಾರಗಳಿಗೆ ಅನ್ವಯವಾಗುತ್ತದೆ. ಈಗಾಗಲೇ ನೋಟೀಸು ಜಾರಿ ಮಾಡಿರುವ ವರ್ತಕರಿಗೆ ಅನ್ವಯವಾಗುವುದಿಲ್ಲ.

#### ತೆರಿಗೆಯನ್ನು ಏಕೆ ಪಾವತಿಸಬೇಕು?

ತೆರಿಗೆ ಸರ್ಕಾರದ ಮುಖ್ಯ ಆದಾಯದ ಮೂಲ. ತೆರಿಗೆ ಸಂಗ್ರಹಿಸುವುದರ ಮೂಲಕ ಸರ್ಕಾರದ ಖಜಾನೆ ತುಂಬುತ್ತದೆ. ತೆರಿಗೆಗಳನ್ನು ಮತ್ತು ಶುಲ್ಕಗಳನ್ನು ಸಾರ್ವಜನಿಕರು ಪಾವತಿಸಿದಲ್ಲಿ ಮಾತ್ರವೇ ಯಾವುದೇ ಸರ್ಕಾರ, ಆರೋಗ್ಯ, ರಸ್ತೆ, ಶಿಕ್ಷಣ ಸೇರಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸುಲಭ ಸಾಧ್ಯ. ಆಂತರಿಕ ಮತ್ತು ಬಾಹ್ಯಭದ್ರತೆ, ಮಿಲಿಟರಿ, ಅಂತಾರಾಷ್ಟ್ರೀಯ ಯೋಜನೆಗಳ ಜಾರಿ ಸೇರಿ ಅನೇಕ ಯೋಜನೆಗಳನ್ನು ಜಾರಿ ಮಾಡಲು ಸಾಧ್ಯ.

ಆದರೆ ತೆರಿಗೆಯನ್ನು ಏತಕ್ಕಾಗಿ ಪಾವತಿಸಬೇಕು? ಎನ್ನುವ ಮೂಲ ಅಂಶವನ್ನು ಜನಸಾಮಾನ್ಯರಿಗೆ ಅರ್ಥೈಸುವಲ್ಲಿ ವ್ಯವಸ್ಥೆ ಎಡವಿದೆ.

ಉದಾ: ಕನ್ಯೆಯನ್ನು ಮದುವೆ ಮಾಡಿಕೊಡುವಾಗ ಕನ್ಯೆಯ ಪೋಷಕರು ಗಂಡಿನ ಪೂರ್ವಾಪರವನ್ನು ಅನೇಕರಿಂದ ವಿಚಾರಿಸಿ, ಹೇಗೆ ತಿಳಿದುಕೊಳ್ಳುತ್ತಾರೋ, ಅದೇ ರೀತಿಯಲ್ಲಿ ಪ್ರತಿಯೊಬ್ಬ ವ್ಯಾಪಾರಸ್ತನು ತಾನು ವ್ಯವಹರಿಸಲು ಇಚ್ಛಿಸಿರುವ ವ್ಯವಹಾರಕ್ಕೆ ಅನ್ವಯಿಸುವ ಕಾನೂನುಗಳ ಬಗ್ಗೆ ತಿಳಿದು ವ್ಯವಹರಿಸುವುದು ಅವರ




ಆದ್ಯ ಕರ್ತವ್ಯ. (ಉದಾ: ಜಿಎಸ್‌ಟಿ, ಆದಾಯ ತೆರಿಗೆ, ಪರವಾನಿಗೆಗಳು, ತೂಕ ಮತ್ತು ಅಳತೆ ಕಾನೂನು, ಕಾರ್ಮಿಕ ಕಾನೂನು, ಭವಿಷ್ಯನಿಧಿ ಕಾನೂನು, ಇತ್ಯಾದಿ). ವಿಪರ್ಯಾಸವೆಂದರೆ, ತೆರಿಗೆ ಕಾನೂನುಗಳ ತಿಳುವಳಿಕೆಗೆ ಪ್ರಸ್ತುತ ಶಿಕ್ಷಣ ಮತ್ತು ವ್ಯವಸ್ಥೆ ನಿರೀಕ್ಷಿಸಿದಷ್ಟು ಯಶಸ್ಸು ಸಾಧಿಸದೇ ಇರುವುದೇ ಅನೇಕ ಗೊಂದಲಗಳಿಗೆ ಕಾರಣವಾಗಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರ, ತಮ್ಮ ಸಾಧನೆ, ಉದ್ಘಾಟನೆ, ಶಂಕುಸ್ಥಾಪನೆ ಸೇರಿ ಅನೇಕ ಸಭೆ – ಸಮಾರಂಭಗಳಿಗೆ ವ್ಯಯಿಸುವ ಮೊತ್ತದ ಅಲ್ಪ ಪ್ರಮಾಣದ ಹಣವನ್ನು ಜನಸಾಮಾನ್ಯರಿಗೆ ಕಾನೂನಿನ ಅರಿವು – ಜಾಗೃತಿ ಮೂಡಿಸಲು ವೈಜ್ಞಾನಿಕವಾಗಿ ವಿನಿಯೋಗಿಸಿದಲ್ಲಿ ಭಾರತದಂಥಹ ದೊಡ್ಡ ರಾಷ್ಟ್ರಕ್ಕೆ ತೆರಿಗೆ ಸಂಗ್ರಹ / ಪಾವತಿಯಲ್ಲಿ ಗಣನೀಯ ಪ್ರಗತಿ ಸಾಧಿಸುವುದು ಸುಲಭ ಸಾಧ್ಯ.

#### ಮಾಧ್ಯಮಗಳ ಪಾತ್ರ

ಮಾಧ್ಯಮಗಳು ವಿಷಯತಜ್ಞರೊಂದಿಗೆ ಸಂದರ್ಶನಗಳನ್ನು ಏರ್ಪಡಿಸಿ Phone-in ಕಾರ್ಯಕ್ರಮಗಳಿಂದ ಜನರ ಅನುಮಾನ–ಆತಂಕಗಳನ್ನು ನಿವಾರಿಸಿ, ಪ್ರಶ್ನೆಗಳಿಗೆ ಉತ್ತರಿಸಿ ಗೊಂದಲಗಳಿಗೆ ಪರಿಹಾರ ಸೂಚಿಸಿಸುವ ಕಾರ್ಯಕ್ರಮಗಳನ್ನು ಆಯೋಜಿಸಿದರೆ ಆತಂಕಕ್ಕೊಳಗಾದ ಜನರಿಗೆ ಸಹಾಯಮಾಡಿದಂತಾಗುತ್ತದೆ.

#### ಮುನ್ನೆಚ್ಚರಿಕೆಗಳು:

- ಬೀದಿ ಬದಿಯ ವ್ಯಾಪಾರಿಗಳು, ಸಣ್ಣ ಮತ್ತು ಮಧ್ಯಮ ವ್ಯಾಪಾರಿಗಳು ವ್ಯಾಪಾರದ/ಒಟ್ಟು ವ್ಯವಹಾರದ ಮೊತ್ತವನ್ನು ಆಧರಿಸಿ ಜಿಎಸ್‌ಟಿ ನೋಂದಣಿ ಮಾಡಿಕೊಳ್ಳಬೇಕು.
- ಖಾತೆಗೆ ಜಮಾ ಆಗುವ ಒಟ್ಟು ಮೊತ್ತದಲ್ಲಿ ವೈಯಕ್ತಿಕ ಮತ್ತು ವ್ಯಾಪಾರದ ಹಣದ ಲೆಕ್ಕಚಾರವನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು.
- ಜಿಎಸ್‌ಟಿ ನೋಟಿಸ್ ಜಾರಿ ಆಗಿದಲ್ಲಿ, ತಕ್ಷಣವೇ ತೆರಿಗೆ ತಜ್ಞರನ್ನು ಭೇಟಿ ಮಾಡಿ, ಸಲಹೆ ಪಡೆಯಬೇಕು.
- ನೋಟೀಸ್ ಜಾರಿ ಆಗಿದ್ದಲ್ಲಿ, ಇಲಾಖೆಗೆ ಸರಿಯಾದ ಉತ್ತರ ನೀಡದಿದ್ದಲ್ಲಿ ಕಾನೂನು ಕ್ರಮ ಖಚಿತ.
- ನಾಗರೀಕರು ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುವ ಉಚಿತಗಳ ಸಮಗ್ರ ಮಾಹಿತಿಯನ್ನು ಆಸಕ್ತಿ ವಹಿಸಿ ಪಡೆದಂತೆ, ತೆರಿಗೆ ಮತ್ತು ಅಭಿವೃದ್ಧಿಯ ಬಗ್ಗೆಯೂ ಸಮಗ್ರ ಮಾಹಿತಿ ಪಡೆಯಬೇಕು.



# ಕಾರ್ಪೊರೇಟ್ ಆಡಳಿತ (Governance) ಮತ್ತು ಸಹಕಾರ

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ.), ಬೆಂಗಳೂರು

ರಾಷ್ಟ್ರದ ಮತ್ತು ವಿಶ್ವದ ಆರ್ಥಿಕ ಬೆಳವಣಿಗೆಯಲ್ಲಿ ಖಾಸಗಿ ವಲಯ ಅದರಲ್ಲಿಯೂ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ (Liberalisation, Privitastion, Globalization) ಪರಿಸರದಲ್ಲಿ ನಾಗಾಲೋಟದಲ್ಲಿ ಬೆಳೆಯುತ್ತಿದೆ. ಇದರ ಪರಿಣಾಮ ಸಂಪತ್ತು ಬೆಳೆಯುತ್ತಿದೆ. ಅದರೊಡನೆ 'ಉಳ್ಳವರು' ಮತ್ತು 'ಇಲ್ಲದವರ' ನಡುವಿನ ಅಂತರ ಕೂಡ ಅಗಾದವಾಗಿ ಬೆಳೆಯುತ್ತಿದ್ದು ಸಮಾಜದಲ್ಲಿ ಅನೇಕ ದುಷ್ಕೃತ್ಯ, ಅಜಾಗೂರುಕತೆ, ಅಕ್ಷೋಭೆಗೆ ಕಾರಣವಾಗುತ್ತಿದೆ.

ವಿಶ್ವದ ಧ್ಯೇಯ ಸಮತಾ ಸಮಾಜ ನಿರ್ಮಾಣದ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧಿಸುವುದಾಗಿದೆ. ಈ ಉದ್ದೇಶ ಸಾಧನೆಗೆ 'ಸಹಕಾರ ಚಳವಳಿ' ಅತ್ಯುತ್ತಮ ಮಾರ್ಗ ಎಂಬುದನ್ನು 'ವಿಶ್ವ ಸಂಸ್ಥೆ'ಯೂ ಕಂಡುಕೊಂಡಿದೆ. ಈ ದಿಸೆಯಲ್ಲಿ 2025ನೇ ವರ್ಷವನ್ನು 'ಅಂತಾರಾಷ್ಟ್ರೀಯ ಸಹಕಾರ ವರ್ಷ'ವಾಗಿ ಘೋಷಿಸಿದೆ. ಕಾರ್ಪೋರೇಟ್ ಸಂಸ್ಥೆಗಳು ಬೆಳೆದಂತೆ ಸಹಕಾರ ಸಂಸ್ಥೆಗಳು ಬೆಳೆಯುತ್ತಿಲ್ಲವೇಕೆ? ಬೆಳೆಯಲು ಅನುಸರಿಸಬೇಕಾದ ಆಡಳಿತ ಕ್ರಮಗಳೇನು? ಈ ವಿಶ್ಲೇಷಣೆ ಯನ್ನು ಸಹಕಾರ ಸಂಸ್ಥೆಗಳು ಕೈಗೊಳ್ಳಬೇಕಿದೆ. ಇದು ಈ ದಿನದ ಅವಶ್ಯಕತೆ. ಕಾರ್ಪೋರೇಟ್ ಆಡಳಿತ ಅಥವಾ ಅತ್ಯುತ್ತಮ ಆಡಳಿತ ಸೂತ್ರ ಗಳನ್ನು ಅಳವಡಿಸಿಕೊಂಡಿದ್ದೇ ಆದಲ್ಲಿ ಸಹಕಾರ ಸಂಸ್ಥೆಗಳು ಯಶಸ್ವಿಯಾಗಿ ನಡೆದು ಸಮತಾ ಸಮಾಜ ನಿರ್ಮಾಣಕ್ಕೆ ತನ್ಮೂಲಕ ಸುಸ್ಥಿರ ಅಭಿವೃದ್ಧಿಗೆ ಕಾರಣವಾಗಬಹುದು.

ಅತ್ಯುತ್ತಮ ಆಡಳಿತ (Good Governance) ಅಥವಾ ಕಾರ್ಪೋರೇಟ್ ಆಡಳಿತದ ಮೂಲ ಸೂತ್ರಗಳನ್ನು ಅರಿಯುವ ಮುನ್ನ ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ಹತೋಟಿಯಿಂದ ನಡೆಯುವ ಸದಸ್ಯರ ಸಂಸ್ಥೆಗಳು, ಚುನಾವಣೆ ಮೂಲಕ 'ಆಡಳಿತ ಮಂಡಳಿ' ರಚನೆಯಾಗುತ್ತದೆ. ಇವರ ನಡುವಿನ ಚುನಾವಣೆಯಿಂದ ಪದಾಧಿಕಾರಿಗಳು 'ಅಧ್ಯಕ್ಷರು, ಉಪಾಧ್ಯಕ್ಷರು' ಆಯ್ಕೆಗೊಳ್ಳುತ್ತಾರೆ.

ಇವರು ಸದಸ್ಯರ ಅವಶ್ಯಕತೆ, ನಿರೀಕ್ಷೆ, ಆಶೋತ್ತರಗಳ ಈಡೇರಿಕೆ ಮಾಡುತ್ತಾರೆ. ಇದರಂತೆ ಸಹಕಾರ ಸಂಸ್ಥೆಗಳು 'ಸದಸ್ಯ ಚಾಲಿತ' ಸಂಸ್ಥೆಗಳಾಗಿ ನಡೆಯುತ್ತವೆ ಎಂಬುದು ಪ್ರಮುಖ ಆಶಯ. ಈ ಆಶಯದ ಈಡೇರಿಕೆಗಾಗಿ ಅತ್ಯುತ್ತಮ ಆಡಳಿತದ ಮೂಲ ಸೂತ್ರಗಳನ್ನು ಆಡಳಿತ ಮಂಡಳಿ ಪಾಲಿಸಬೇಕಾದ ಅವಶ್ಯಕತೆ ಇದೆ.

**ಅತ್ಯುತ್ತಮ ಆಡಳಿತ ಸೂತ್ರಗಳು:** (1) ಪಾರದರ್ಶಕತೆ (2) ಪಾಲ್ಗೊಳ್ಳುವಿಕೆ (3) ಮುಂದಾಲೋಚನೆ/ ದೂರಾಲೋಚನೆ (4) ಉತ್ತರದಾಯಿತ್ವ/ಹೊಣೆಗಾರಿಕೆ ಈ ನಾಲ್ಕು ಮೂಲ ಸೂತ್ರಗಳನ್ನು ಅತ್ಯುತ್ತಮ ಆಡಳಿತ ಅಥವಾ ಕಾರ್ಪೋರೇಟ್ ಆಡಳಿತದ ನಾಲ್ಕು ಆಧಾರಸ್ತಂಭಗಳು ಎಂದು ಪರಿಗಣಿಸಲಾಗಿದೆ. ಈ ಆಡಳಿತ ಸೂತ್ರಗಳನ್ನು ಮೇಳೈಸಿ ಸಹಕಾರ ಸಂಸ್ಥೆಗಳಲ್ಲಿ ಸಹಕಾರ ಆಡಳಿತವನ್ನು ಅತ್ಯುತ್ತಮ ಸಹಕಾರ ಆಡಳಿತವಾಗಿ ರೂಪಿಸುವುದು ಈ ದಿನದ ಅವಶ್ಯಕತೆಯೂ , ಅನಿವಾರ್ಯವೂ ಆಗಿದೆ ಎಂದರೆ ತಪ್ಪಾಗಲಾರದು.



**(1) ಪಾರದರ್ಶಕತೆ (Transparency):** ಆಡಳಿತ ಮಂಡಳಿ ತಾನು ತೆಗೆದುಕೊಳ್ಳುವ ನಿರ್ಧಾರಗಳು, ಕೈಗೊಳ್ಳುವ ಯೋಜನೆಗಳು ಪಾರದರ್ಶಕತೆಯಿಂದ ಕೂಡಿರಬೇಕು. ಇದರಿಂದ ಆಡಳಿತ ಮಂಡಳಿಯು ಪ್ರಾಮಾಣಿಕ, ದಕ್ಷ ಹಾಗೂ ಕ್ರಿಯಾಶೀಲ ಆಡಳಿತವನ್ನು ನಡೆಸುತ್ತಿದೆ ಎಂದು ಗೋಚರವಾಗುತ್ತದೆ. ಆಡಳಿತ ಮಂಡಳಿ ಸಭೆಗಳು ಕೇವಲ ಔಪಚಾರಿಕ ಸಭೆಗಳಾಗದೆ 'ಕ್ರಿಯಾಶೀಲ' ಸಭೆಯಾಗಿ ಅದರ ನಡವಳಿಕೆಗಳು ಅನುಷ್ಠಾನಗೊಂಡು ಸದಸ್ಯೋಪಯೋಗಿ ಪರಿವರ್ತನೆ ಗೊಳ್ಳಬೇಕು. ಉದಾಹರಣೆಗೆ ಯಂತ್ರೋಪಕರಣಗಳ ಖರೀದಿ, ಕಂಪ್ಯೂಟರೀಕರಣ, ಸಿಬ್ಬಂದಿ ನೇಮಕಾತಿ, ಕಟ್ಟಡ ನಿರ್ಮಾಣ, ರಿಪೇರಿ, ಕಟ್ಟಡ ಖರೀದಿ, ಮಾರಾಟ, ಸಾಲ ಮಂಜೂರಾತಿ, ಇತರೆ., ಟೆಂಡರ್ ಕರೆಯುವುದು, ಜಾಹಿರಾತು ನೀಡುವುದು, ಸಾಕಷ್ಟು ಪ್ರಚಾರ ಪಡಿಸುವುದು, ಈ ಮೂಲಕ ಅತ್ಯುತ್ತಮ ಗುತ್ತಿಗೆದಾರರ ಆಯ್ಕೆ, ಸಿಬ್ಬಂದಿ ನೇಮಕಾತಿ, ಸರಬರಾಜುದಾರರ, ಸೇವೆ ಸಲ್ಲಿಸುವವರಿಗೆ ಅವಕಾಶ ಒದಗಿಸುವುದು. ಇದರಿಂದ ಸದಸ್ಯರು ಮತ್ತು ಸಾರ್ವಜನಿಕರಲ್ಲಿ ಸಹಕಾರ ಸಂಸ್ಥೆ ಬಗ್ಗೆ ಸದಭಿಪ್ರಾಯ ಮೂಡುತ್ತದೆ. ಸದಸ್ಯರಿಗೆ ಅತ್ಯುತ್ತಮ ಸೇವೆ ದೊರೆಯುತ್ತದೆ.

**(2) ಪಾಲ್ಗೊಳ್ಳುವಿಕೆ (Participation):** ಸದಸ್ಯರು, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ, ಸರಬರಾಜುದಾರರು/ ಗುತ್ತಿಗೆದಾರರು/ ಗ್ರಾಹಕರು ಇವರುಗಳು ಸಹಕಾರ ಸಂಸ್ಥೆಯ ಭಾಗೀದಾರರು (stake holders) ಆಗಿರುತ್ತಾರೆ. ಇವನೆಲ್ಲರನ್ನೂ ಒಳಗೊಂಡು, ಪಾಲ್ಗೊಳ್ಳುವಂತೆ ಮಾಡಿ ನಿರ್ಧಾರಗಳನ್ನು ತೆಗೆದುಕೊಂಡಲ್ಲಿ ಅದರ ಅನುಷ್ಠಾನ ಸುಲಭ ಸಾಧ್ಯವಾಗುತ್ತದೆ. ಇದನ್ನು 'ಪಾಲ್ಗೊಳ್ಳುವಿಕೆಯ ವ್ಯವಸ್ಥಾಪನೆ' (partpative Management) ಎನ್ನಲಾಗುತ್ತದೆ. ಯಾವುದೇ ಯೋಜನೆಯ ಅನುಷ್ಠಾನ / ಕಾರ್ಯಗತಗೊಳಿಸುವಲ್ಲಿ' ಅವರನ್ನೂ ಒಳಗೊಳ್ಳುವಂತೆ ಮಾಡಲು ಸಾಧ್ಯವಾಗುತ್ತದೆ. ಆಡಳಿತ ಮಂಡಳಿ ನಿರ್ಧಾರ ತೆಗೆದುಕೊಳ್ಳುವ ಪೂರ್ವದಲ್ಲಿ ಕ್ರಿಯಾಶೀಲ ಸದಸ್ಯರ/ ಸಕ್ರಿಯ ಸದಸ್ಯರ / ವಿಶೇಷ ಮಹಾಸಭೆ ಕರೆಯುವುದು, ಗ್ರಾಹಕರ ಸಮಾವೇಷ, ಸಿಬ್ಬಂದಿ ಸಭೆಗಳಲ್ಲಿ ಪ್ರಸ್ತಾಪಿಸಿ ಅಭಿಪ್ರಾಯ ಸಂಗ್ರಹಣೆ, ಸುತ್ತೋಲೆ, ಪ್ರಕಟಣೆ ಮೂಲಕ ಸಲಹೆ, ಸೂಚನೆಗಳನ್ನು ಪಡೆಯುವುದು. ಅಭಿಪ್ರಾಯಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವುದು. ಇದರಿಂದ ನಿರ್ಧಾರ ತೆಗೆದುಕೊಳ್ಳುವಲ್ಲಿ ಎಲ್ಲ ಭಾಗೀಧಾರವನ್ನು ಒಳಗೊಂಡಂತಾಗುತ್ತದೆ. ಅನುಷ್ಠಾನಗೊಳ್ಳಬಲ್ಲ/ಕಾರ್ಯಗತಗೊಳ್ಳಬಲ್ಲ ಯೋಜನೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಎಲ್ಲ ಭಾಗೀದಾರರ ಬದ್ದತೆಯನ್ನು ಖಾತ್ರಿಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ.

**(3) ಮುಂದಾಲೋಚನೆ/ದೂರಾಲೋಚನೆ (Predicability):** ಇದು ಉತ್ತಮ ನಾಯಕತ್ವದ ಗುಣ. ಆಡಳಿತ ಮಂಡಳಿ ಸದಸ್ಯ / ನಿರ್ದೇಶಕರು ಸದಸ್ಯರ 'ನಾಯಕರು' ಸದಸ್ಯರಿಂದ ಸದಸ್ಯರಿಗಾಗಿ ಚುನಾಯಿತಗೊಂಡು ಆಡಳಿತದ ಚುಕ್ಕಾಣಿ ಹಿಡಿದವರು. ತಾವು ಯಾವುದೇ ನಿರ್ಧಾರ ತೆಗೆದುಕೊಂಡರೆ ಅದರ ದೂರಗಾಮಿ ಪರಿಣಾಮಗಳ ಬಗ್ಗೆ ಆಲೋಚಿಸಬೇಕಾಗುತ್ತದೆ. ಉದಾ: ಠೇವಣಿಗಳ ಸಂಗ್ರಹಣೆಯಿಂದ ಕಟ್ಟಡ ನಿರ್ಮಾಣ, ಠೇವಣಿಗಳನ್ನು ಬಡ್ಡಿ ಸಹಿತ ಹಿಂತಿರುಗಿಸುವ ಬಗೆ ಹೇಗೆ? ಕಟ್ಟಡದಿಂದ ಅಷ್ಟು ಹುಟ್ಟುವಳಿ ಸಾಧ್ಯವೇ?, ಅಧಿಕ ಬಡ್ಡಿ ಅವಧಿ ಠೇವಣಿ ಸಂಗ್ರಹಣೆ, ಅದರ ಮೇಲೆ ನಿಧಿಗಳ ಮೇಲಿನ ವೆಚ್ಚದ ಮೇಲಿನ ಪರಿಣಾಮ. ಸಾಲ ನೀಡಿಕೆ, ಹೂಡಿಕೆ ಮೇಲೆ ಗಳಿಸಬಹುದಾದ ಗಳಿಕೆ ಎಷ್ಟು? ಅಂತರ ಸಾಧ್ಯವೇ? ಅಲ್ಪ ಜೀವಿತಾವಧಿ ವಸ್ತುಗಳ ಖರೀದಿ ಮಾರಾಟ ಆಗಬಹುದಾದ ಲಾಭ/ನಷ್ಟಗಳ ಲೆಕ್ಕಾಚಾರ. ಕೃಷಿ ಉತ್ಪನ್ನಗಳ ಸಂಗ್ರಹಣೆ ಮಾರಾಟ ಇತರೆ. ಸಹಕಾರ ಸಂಸ್ಥೆ ಮುಂದೆ ನಷ್ಟಕ್ಕೆ ಈಡಾಗದಂತೆ, ಅದರ ನಿಧಿಗಳು ಸವಕಳಿ ಯಾಗದಂತೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

ಬಂಡವಾಳದ ಹಿಂತಿರುಗುವಿಕೆ (Return of Capital), ಬಂಡವಾಳ ದಿಂದ ಗಳಿಕೆ (Return from Capital), ಬಂಡವಾಳಕ್ಕೆ ಬಂಡವಾಳ ಸೇರ್ಪಡೆ (Return to Capital)ನ್ನು ಖಾತ್ರಿಗೊಳಿಸಿಕೊಳ್ಳಬೇಕಾಗುತ್ತದೆ. ಆಡಳಿತ ಮಂಡಳಿ ವಿವೇಚನಯುತವಾದ, ಸದಸ್ಯರ ಒಳಿತಿಗಾಗಿ, ಸಹಕಾರ ಸಂಸ್ಥೆಯು ಶಾಶ್ವತವಾಗಿ ನೆಲೆಗೊಳ್ಳುವಂತ ಮುಂದಿನ ಪೀಳಿಗೆಗೂ ಉಪಯುಕ್ತವಾಗಬಲ್ಲ ಸಂಸ್ಥೆಯಾಗಿ ರೂಪುಗೊಳ್ಳಲು ಸಾಧ್ಯವಾಗುವಂತಹ ತೀರ್ಮಾನ/ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

**(4) ಉತ್ತರದಾಯಿತ್ವ / ಹೊಣೆಗಾರಿಕೆ (Accountability):** ಆಡಳಿತ ಮಂಡಳಿ ಸದಸ್ಯರು/ನಿರ್ದೇಶಕರು ಸದಸ್ಯರಿಗೆ ಹೊಣೆಗಾರರು ಎಂಬ ಜವಾಬ್ದಾರಿಯುತ ಅರಿವು ಅವರಲ್ಲಿ ಇರತಕ್ಕದ್ದು. ಆಡಳಿತ ಮಂಡಳಿ ಸಾಮಾನ್ಯ ನಿಕಾಯಕ್ಕೆ ಜವಾಬ್ದಾರಿ. ಸಹಕಾರಿ ಸಂಸ್ಥೆಯ 'ಯಜಮಾನರು' ಸದಸ್ಯರು. ಸದಸ್ಯರು ಒಟ್ಟುಗೂಡಿ 'ಸ್ವಸಹಾಯ ಮತ್ತು ಪರಸ್ಪರ ಸಹಾಯ' ಆಧಾರಿತವಾಗಿ ತಮ್ಮ ಅವಶ್ಯಕತೆಗಾಗಿ ತಾವು ಸ್ಥಾಪಿಸಿಕೊಂಡಿರುವ ಸಂಸ್ಥೆ ಇದು. ಅವಶ್ಯ ವ್ಯವಹಾರ ನಡೆಸಲು ಅನುಕೂಲವಾಗುವಂತೆ ತಮ್ಮಲ್ಲಿ ತಾವು ತಮ್ಮ ಪ್ರತಿನಿಧಿಗಳಾಗಿ ಪ್ರಜಾಸತ್ತಾತ್ಮಕ ನಿಯಂತ್ರಣ/ಆಡಳಿತಕ್ಕಾಗಿ ಆಯ್ಕೆ ಮಾಡಲಾಗಿರುತ್ತದೆ. ಆದುದರಿಂದ, ತಾವು ನಿರ್ದೇಶಕರಾಗಿ ಸದಸ್ಯರಿಗೆ ಹೊಣೆಗಾರರು ಎಂಬ ಅರಿವು ಇರತಕ್ಕದ್ದು. ಈ ಅರಿವಿನಿಂದ ತಮ್ಮಲ್ಲಿ ಜವಾಬ್ದಾರಿ ಮೂಡಿ ಸ್ವ ಹಿತಾಸಕ್ತಿ, ಹಿತಾಸಕ್ತಿ ಸಂಘರ್ಷ, ಅಪ್ರಮಾಣಿಕತೆಗಳಿಗೆ ಅವಕಾಶವಿಲ್ಲದಂತೆ ವರ್ತಿಸಲು ಸದಾ ಸದಸ್ಯರ ಹಿತಾಸಕ್ತಿಗೆ ಪೂರಕವಾಗಿ ವರ್ತಿಸಲು ಸಾಧ್ಯವಾಗುತ್ತದೆ. ಸಹಕಾರ ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸಿ ಸದಸ್ಯರಿಗೆ ಲಾಭಾಂಶ (Dividend) ವಿತರಿಸುವ, ಸಿಬ್ಬಂದಿ ವರ್ಗದವರಿಗೆ ವೇತನ ದೊರೆಯುವಂತೆ ಮಾಡುವ, ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿ ಹಿಂತಿರುಗಿಸುವ, ಸಾಲ ಅವಶ್ಯವುಳ್ಳ ಸದಸ್ಯರಿಗೆ ಸಾಲ ವಿತರಿಸುವ, ಸಾಲಗಾರ ಸದಸ್ಯರಿಂದ ಸಕಾಲದಲ್ಲಿ ಬಡ್ಡಿ ಸಹಿತ ಸಾಲ ವಸೂಲಿ ಮಾಡುವ ಜವಾಬ್ದಾರಿ ತಮ್ಮದಾಗಿದೆ ಎಂಬ ಹೊಣೆಗಾರಿಕೆಯನ್ನು ಆಡಳಿತ ಮಂಡಳಿ ಹೊಂದಿರತಕ್ಕದ್ದು. ಇದರಿಂದ ಸೂಕ್ತ ನಿರ್ಧಾರಗಳನ್ನು ಸಕಾಲದಲ್ಲಿ ತೆಗೆದುಕೊಂಡು ಸಹಕಾರ ಸಂಸ್ಥೆಯನ್ನು ಯಶಸ್ವಿಯಾಗಿ, ಸದಸ್ಯ ಸ್ನೇಹಿಯಾಗಿ ನಡೆಸಲು ಸಾಧ್ಯವಾಗುತ್ತದೆ.

ಸಹಕಾರ ಸಂಸ್ಥೆಯಾಗಿ ಈ ಮೇಲಿನ ಅತ್ಯುತ್ತಮ ಮೂಲ ಸೂತ್ರಗಳಲ್ಲದೇ ಸಹಕಾರ ಮೌಲ್ಯಗಳು ಮತ್ತು ಸಹಕಾರ ತತ್ವಗಳನ್ನು ಈ ಸೂತ್ರಗಳೂಡನೆ ಮೇಳೈಸಿ ಆಡಳಿತ ಮಂಡಳಿಯು ಸೂಕ್ತ ನಿರ್ಧಾರಗಳನ್ನು/ತೀರ್ಮಾನಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ.

### ಸಹಕಾರ ಮೌಲ್ಯಗಳು:

**1) ಸ್ವಸಹಾಯ ಮತ್ತು ಪರಸ್ಪರ ಸಹಾಯ:** ಈ ಮೌಲ್ಯ ಸಹಕಾರದ ತಿರುಳು. ಭವಿಷ್ಯಕ್ಕಾಗಿ ನಿಧಿ ಉಳಿತಾಯ, ಲಾಭಾಂಶದ ಸೀಮಿತ ವಿತರಣೆ, ಶಕ್ತರಿಂದ ಠೇವಣಿ ಸಂಗ್ರಹಣೆ ಅವಶ್ಯವಿರುವವರಿಗೆ ಸಾಲ, ಮುಂತಾದುವು ಪ್ರಮುಖ ಅಂಶಗಳು ಈ ಮೌಲ್ಯ ಪಾಲನೆ ಅತಿ ಅಗತ್ಯ.

**(2) ಸ್ವಯಂ ಜವಾಬ್ದಾರಿ:** ಸಹಕಾರ ಸಂಸ್ಥೆಯ ಎಲ್ಲ ಭಾಗೀದಾರರು ಸ್ವಯಂ ತಮ್ಮ ತಮ್ಮ ಜವಾಬ್ದಾರಿ ಅರಿತು ನಡೆದರೆ ಸಂಸ್ಥೆ ಯಶಸ್ವಿಯಾಗಿ

**ಸದಸ್ಯರಾಗಿ ಎಲ್ಲರೂ ಸಮಾನರು, ಒಬ್ಬ ಸದಸ್ಯ ಒಂದು ಮತ. ಬಂಡವಾಳವಿಲ್ಲದೇ ವ್ಯವಹಾರ ನಡೆಸಲಾಗುವುದಿಲ್ಲ. ಇದು ಮೌಲ್ಯಯುತವಾದ ಬಂಡವಾಳ, ಶ್ರಮದಿಂದ ಸಂಗ್ರಹಿಸಿದ ಬಂಡವಾಳ ಇದನ್ನು ರಕ್ಷಿಸುವುದು, ಉಳಿಸುವುದು, ಬೆಳೆಸುವುದು ಅತ್ಯಂತ ಪ್ರಮುಖ ಅಂಶ. ಒಗ್ಗಟ್ಟು ಸಂಸ್ಥೆ ಬೆಳೆಸುವಲ್ಲಿ ಅತ್ಯಮೂಲ್ಯ ಅಂಶ. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಮರೆಯಲಾಗದು.**



ನಡೆಯುವುದರಲ್ಲಿ ಸಂಶಯವಿಲ್ಲ.

**(3) ಪ್ರಜಾಪ್ರಭುತ್ವ:** ಸಂಸ್ಥೆಯ ಮೂಲ ಲಕ್ಷಣ, ರಚನಾ ಮತ್ತು ನಿಯಂತ್ರಣ ವ್ಯವಸ್ಥೆ, ಖಾಸಗಿ ಅಥವಾ ಕಂಪನಿ ಮತ್ತು ಸಹಕಾರ ಆಡಳಿತ ವ್ಯವಸ್ಥೆಯಲ್ಲಿನ ವ್ಯತ್ಯಾಸ. ಪ್ರಜ್ಞಾವಂತ ಸದಸ್ಯರು ಜವಾಬ್ದಾರಿಯುತ ಆಡಳಿತ ಮಂಡಳಿ ರಚಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.' ಕಾರ್ಪೋರೇಟ್ ಆಡಳಿತ ಒದಗಿಸುವುದು ಇವರ ಜವಾಬ್ದಾರಿ.

**(4) ಸಮಾನತೆ, ಬಂಡವಾಳ, ಮತ್ತು ಒಗ್ಗಟ್ಟು:** ಸದಸ್ಯರಾಗಿ ಎಲ್ಲರೂ ಸಮಾನರು, ಒಬ್ಬ ಸದಸ್ಯ ಒಂದು ಮತ. ಬಂಡವಾಳವಿಲ್ಲದೇ ವ್ಯವಹಾರ ನಡೆಸಲಾಗುವುದಿಲ್ಲ. ಇದು ಮೌಲ್ಯಯುತವಾದ ಬಂಡವಾಳ, ಶ್ರಮದಿಂದ ಸಂಗ್ರಹಿಸಿದ ಬಂಡವಾಳ ಇದನ್ನು ರಕ್ಷಿಸುವುದು, ಉಳಿಸುವುದು, ಬೆಳೆಸುವುದು ಅತ್ಯಂತ ಪ್ರಮುಖ ಅಂಶ. ಒಗ್ಗಟ್ಟು ಸಂಸ್ಥೆ ಬೆಳೆಸುವಲ್ಲಿ ಅತ್ಯಮೂಲ್ಯ ಅಂಶ. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಮರೆಯಲಾಗದು.

### ಸಹಕಾರ ತತ್ವಗಳು:

**(1) ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ;** ಸರ್ವರನ್ನೂ ಒಳಗೊಳ್ಳುವ ಪ್ರಕ್ರಿಯೆ, ಸದಸ್ವತ್ವ ನೀಡುವುದು ಆಡಳಿತ ಮಂಡಳಿಯಲ್ಲಿ ನಿಹಿತ ಅಧಿಕಾರ. ಸಂಸ್ಥೆಯ ಉದ್ದೇಶಗಳ ಈಡೇರಿಕೆಗೆ ಸಂಬಂಧಿಸಿದಂತೆ ಸದಸ್ಯತ್ವದ ಅರ್ಹತೆ ನಿಗದಿ ಪಡಿಸಲಾಗಿರುತ್ತದೆ. ಯಾವುದೇ ರಾಗದ್ವೇಷಕ್ಕೆ ಒಳಗಾಗದೇ ಅರ್ಹರೆಲ್ಲರಿಗೂ ಮುಕ್ತವಾಗಿ ಸದಸ್ಯತ್ಯ ನೀಡುವುದು.

**(2) ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ/ನಿಯಂತ್ರಣ:** ಸಕಾಲದಲ್ಲಿ ಚುನಾವಣೆಗಳನ್ನು ನಡೆಸುವುದು ಆಡಳಿತ ಮಂಡಳಿ ಜವಾಬ್ದಾರಿ. ಸಕಾರಣವಿಲ್ಲದೆ ಮುಂದೂಡುವುದು, ರದ್ದು ಮಾಡುವುದು, ನಡೆಸದೆ ಇರುವುದು, ಆಡಳಿತ ಮಂಡಳಿ ರದ್ಧತಿಗೆ ಕಾರಣವಾಗುವುದು ಉತ್ತಮ ಪ್ರಜಾಪ್ರಭುತ್ವದ ಲಕ್ಷಣವಲ್ಲ.

**(3) ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲ್ಗೊಳ್ಳುವಿಕೆ:** ಇದರ ಹೆಚ್ಚಳಗೊಳ್ಳುವಿಕೆಯಿಂದ ವ್ಯವಹಾರದ ಗಾತ್ರ ಹೆಚ್ಚುತ್ತದೆ. ಲಾಭದಾಯಕತೆ ಹೆಚ್ಚುತ್ತದೆ. ಆಡಳಿತ ಮಂಡಳಿ ಇದರ ಈಡೇರಿಕೆಗಾಗಿ ಸೂಕ್ತ ಉತ್ತೇಜನ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

**(4) ಸ್ವಾಯುತ್ತತೆ ಮತ್ತು ಸ್ವಾತಂತ್ರ್ಯ:** ಆಡಳಿತ ಮಂಡಳಿ ಸದಸ್ಯ ಕೇಂದ್ರಿಕೃತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯಾವುದೇ ಅಡಚಣೆಯಿಲ್ಲ ಆದರೆ, ಸ್ವೇಚ್ಛಾಚಾರಕ್ಕೆ ಎಡೆಯಾಗಬಾರದು.

**(5) ಶಿಕ್ಷಣ, ತರಬೇತಿ, ಪ್ರಚಾರ:** ಸಹಕಾರ ಚಳವಳಿ ಬೆಳೆಯಲು ಇದರ ಅಗತ್ಯವಿದೆ. ಆಡಳಿತ ಮಂಡಳಿ ಸದಸ್ಯ ಶಿಕ್ಷಣಕ್ಕೆ ಅತಿ ಹೆಚ್ಚಿನ ಮಹತ್ವವನ್ನು ನೀಡಬೇಕು.

**(6) ಸಹಕಾರ ಸಂಸ್ಥೆಗಳ ನಡುವೆ ಸಹಕಾರ :** ಸಹಕಾರದಲ್ಲಿನ ಬಂಡವಾಳದ ಕ್ರೋಡಿಕರಣ ಅಗತ್ಯ. ಬಹು ಹಂತದ ವ್ಯವಸ್ಥೆಯಲ್ಲಿ ಲಂಭ ರೇಖೆ (Verticle) ಯಲ್ಲಿ ಎಂದರೆ ವಿವಿಧ ಹಂತದ ಸಂಸ್ಥೆಗಳ ನಡುವೆ ಸಾವಯವ ಸಂಬಂಧ, ಒಂದೊಕ್ಕೊಂದು ಪೂರಕವಾಗಿ ಕರ್ತವ್ಯ ನಿರ್ವಹಿಸುವ ಅಗತ್ಯತೆ. ಅಡ್ಡರೇಖೆ (Horizontal) ಒಂದೇ ಹಂತದ ವಿವಿಧ ರೀತಿಯ ಸಹಕಾರ ಸಂಸ್ಥೆಗಳ ನಡುವೆ ಸಹಕಾರ ಇದರಿಂದ ಬಂಡವಾಳ ವೃದ್ಧಿ ಸಾಧ್ಯ. ಅಂತಿಮವಾಗಿ 'ವ್ಯಕ್ತಿ' ಸದಸ್ಯರ ಅವಶ್ಯಕತೆಯ ಪೂರೈಕೆ ಸಾಧ್ಯವಾಗುತ್ತದೆ.

**(7) ಸಾಮಾಜಿಕ ಕಳಕಳಿ:** ಸಂಸ್ಥೆ ಸಮಾಜ/ ಸಮೂಹ ದ ಒಂದು ಭಾಗ, ತನ್ನ ಅಸ್ಥಿತ್ವವೇ ಸಮೂಹಕ್ಕಾಗಿ ಆದ್ದರಿಂದ ತನ್ನ ಲಾಭದಲ್ಲಿ ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಅತ್ಯುತ್ತಮ ಆಡಳಿತಕ್ಕೆ ಅವಶ್ಯ ಅಂಶಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಲ್ಲಿ ಕಲಂ 28 ಅ ಯಲ್ಲಿ, ಕರ್ನಾಟಕ ಸೌಹಾರ್ದ ಕಾಯಿದೆ 1997ರಲ್ಲಿ ಕಂ 27 ರಲ್ಲಿ ಸವಿವರವಾಗಿ ವಿವರಿಸಲಾಗಿದೆ ಮತ್ತು ಆಡಳಿತ ಮಂಡಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ. ಅದರಂತೆ ಆಡಳಿತ ಮಂಡಳಿ ಕಾರ್ಯವೆಸಗಿದಲ್ಲಿ ಸಹಕಾರ ಸಂಸ್ಥೆಗಳು ಯಶಸ್ಸು ಗಳಿಸಿ ಸಹಕಾರ ಚಳವಳಿಯ ಉದ್ದೇಶ ಸಫಲವಾಗುತ್ತದೆ.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ಧ ನಮ್ಮ ಮಹಾದೇವ ಸೆಟ್ಟಿ
ಒಮ್ಮನವಾದರೆ ಒಡನೆ ನುಡಿವನು, ಇಮ್ಮನವಾದರೆ ನುಡಿಯನು
ಕಾಣಿಯ ಸೋಲ, ಅರ್ಧ ಗಾಣಿಯ ಗೆಲ್ಲ;
ಜಾಣ ನೋಡವ್ವ ನಮ್ಮ ಕೂಡಲ ಸಂಗಮ ದೇವಾ – ಬಸವಣ್ಣ